


ಸಂಪುಟ ೧]　　ಕೊರವಂಜಿ—ಮಾರ್ಚಿ ೧೯೪೩　　[ಸಂಚಿಕೆ ೧೨

ಕುಹಕಿಡಿಗಳು

ಕಲ್ಕತ್ತಾದಲ್ಲಿ ಸಂಗ್ರಾಮ ಗುಪ್ತಸಭೆ ನಡೆಯುತ್ತದೆ—
—ಎಂದು ಪತ್ರಿಕೆಯ ಶಿರೋನಾಮ.

*　　*　　*

ಸೈಗಾನ್‌ನಿಂದ ಬರುವ ಸಲಹೆಗಳು ಮುಫತ್ತಂತೆ.
—ಸಲಹೆಗಳನ್ನು ಅನುಸರಿಸದೆ ಇದ್ದರೆ ಮುಫತ್ತು, ಅನುಸರಿಸಿದರೆ ಲಾಕಪ್ಪು—

*　　*　　*

ಬಂಗಾಳಾದಲ್ಲಿ ಮಂತ್ರಿಮಂಡಲದ ಸ್ಥಿತಿಯು ತೃಪ್ತಿಕರವಂತೆ.
—ಅಹುದು - ಇನ್ನೂ ರಾಜೀನಾಮೆಗಳನ್ನು ಕೊಡುತ್ತಿದ್ದಾರೆ.

*　　*　　*

ಸಮ್ಮೂರಿನ ಮಂತ್ರಿಮಂಡಲವು ಪ್ರಗತಿಕರ ಎಂದು ಶಿರೋನಾಮೆ.
—ಹೌದು. ಇನ್ನೂ ನೇಮಿಸಲ್ಪಡದೆ ಇರುವ ಮಂತ್ರಿಯು ಆಗಲೇ ಎಷ್ಟು ಗೊಂದಲವೆಬ್ಬಿಸಿದ್ದಾನೆ?—

*　　*　　*

ಅಶರೀರವಾಕ್ಕು ಈ ಕಲಿಯುಗದಲ್ಲಿ ಕೇಳಿಸುತ್ತದೆಯೇ? ಎಂಬ ಪ್ರಶ್ನೆ—
—ಇಲ್ಲದೇ ಏನು. ಯಾವುದಾದರೂ ರೇಡಿಯೋ ತಿರುಗಿಸಿ. ಅಶರೀರ ವಾಕ್ಕುಗಳೇ, ಶರೀರ ವಾಕ್ಕುಗಳಿಗಿಂತ ಹೆಚ್ಚು—

*　　*　　*

ಹೆಣ್ಣುಮಕ್ಕಳ ಶಾಲೆಯಲ್ಲಿ 'ಡ್ರಿಲ್' ಮಾಡಲೇಬೇಕಂತೆ.

—Eyes Right. Eyes Left—ಅವರಿಗೆ ಕಲಿಸಿಕೊಡಬೇಕೆ?

* * *

ಈಚೀಚೆ ತಿಂವರೆ ಬಟ್ಟೆತಲೆಯು ಸೋಂಪಾಗಿ ಕೂದಲಿಗೆ ಆಸರೆಕೊಡುವುದಂತೆ—

—ಈಗಿನ ಪ್ರಶ್ನೆ - ಸ್ನೇಹಿತರು ಬೇಕೆ - ಜುಟ್ಟು ಬೇಕೆ?

* * *

ನೀರಿನ ಕೆಳಗೆ ಕೂಡ ಹಾರ್ಮೋನಿಯಮ್ಮನ್ನು ಬಾರಿಸಬಹುದಂತೆ—

—ಅಂದಮೇಲೆ ಹಾಗೇಕೆ ಮಾಡುವುದಿಲ್ಲ!

* * *

ಇನ್ನುಮೇಲೆ ಫುಟ್‌ಬಾಲ್ ಆಟದಲ್ಲೂ, ಹಾಕಿಯಲ್ಲಿದ್ದಂತೆಯೇ ಇಬ್ಬರು ಅಂಪೈರುಗಳನ್ನು ಇರಿಸಬೇಕೆಂದು ಸಲಹೆಯಂತೆ.

—ಇದರಿಂದ ಅಂಪೈರುಗಳಿಗಾಗಬಹುದಾದ ಅಪಘಾತಗಳು ಅರ್ಧವಾದಂತೆಯೇ, ಏಕೆಂದರೆ ಒಬ್ಬೊಬ್ಬ ಅಂಪೈರೂ ಒಂದೊಂದು ದಿಕ್ಕಿಗೆ ಓಡಬಹುದು.

* * *

ಈಗೀಗ ತಿನ್ನಲು ಅನ್ನವೂ ಇಲ್ಲ - ಕುಡಿಯಲು ಅಂಬಲಿಯೂ ಇಲ್ಲ ಎಂದು ಸಂಸಾರೀಕನ ಗೋಳು ಕರೆ.

—ಅದಕ್ಕೇ ಅಲ್ಲವೇ ಯುದ್ಧವನ್ನೇರ್ಪಡಿಸಿರುವುದು. ಸೈನ್ಯಕ್ಕೆ ಸೇರಿಕೊಳ್ಳಿ ಎಂದು ಹೇಳುವುದು.

* * *

ಚರ್ಚಿಲ್ಲರಿಗೆ ಕೆಲವು ದಿನಗಳಿಂದ ಜ್ವರ ಬರುತ್ತಿದೆಯಂತೆ—

—ಮಹಾತ್ಮರ ನಿರಶನವ್ರತಕ್ಕಾಗಿ ಕೊರಗಿ ಕೊರಗಿ ಹೀಗಾಯಿತೆಂದು ಸುದ್ದಿ ಬಂದಿದೆ.

* * *

ಒಂದೊಂದು ಹೋಟಲು ಹತ್ತಿರ ಕೂಡ ಒಂದೊಂದು ಆಯುಷ್ಕರ್ಮಶಾಲೆ ಎಂದು ವರದಿ.

—ಈಗ ಷುರುವಾಯಿತು ಸಮಸ್ಯೆ. ಚೌರ ಮಾಡಿಸಿಕೊಂಡು ತಿಂಡಿ ತಿನ್ನ ಬೇಕೇ? - ತಿಂಡಿ ತಿಂದು ಚೌರ ಮಾಡಿಸಿಕೊಳ್ಳಬೇಕೇ?

* * *

ಮಿತ್ರಪಕ್ಷದವರು ಸಾವಿರಾರುಗಟ್ಟಲೆ ಬಾಂಬುಗಳನ್ನು ಶತ್ರು ನಿಲ್ದಾಣಗಳಮೇಲೆ ಮಳೆ ಸುರಿಸುತ್ತಿರುವರಂತೆ.

—ಈ ಕಬ್ಬಿಣವನ್ನು ಶತ್ರುಪಕ್ಷದವರು ತಮ್ಮ ಕೈಗಾರಿಕೆಗಳಿಗಾಗಿ ಇನ್ನೂ ಉಪಯೋಗಿಸಿಕೊಂಡಿಲ್ಲವಂತೆ.

ಹುರಿಗಾಳು

ಮುದ್ರಾರಾಕ್ಷಸರತ್ನ

"ಮದುವೆಯಾದ ಮೇಲೆ ಅವರು ಸುಖವಾಗಿ ಅನ್ಯೋನ್ಯವಾಗಿ ಬಾಳಿ ಬದುಕಿದರು" ಎಂಬುದಕ್ಕೆ "ಮದುವೆಯಾದ ಮೇಲೂ ಅವರು ಸುಖವಾಗಿ ಅನ್ಯೋನ್ಯವಾಗಿ ಬಾಳಿ ಬದುಕಿದರು".

ಖಾಲಿ ಬುರುಡೆ

"ನನ್ನ ಬುದ್ಧಿಗೆ ತೋಚಿದ್ದನ್ನು ನಾನು ಹೇಳಿಬಿಡುತ್ತೇನೆ" ಅಂತ ಉಪನ್ಯಾಸಕರು ಪ್ರಾರಂಭಿಸಿದಾಗ, ಅಧ್ಯಕ್ಷರೆದ್ದು "ಹಾಗಾದರೆ, ಉಪನ್ಯಾಸ ಇಲ್ಲಿಗೇ ಮುಗಿದ ಹಾಗೆ" ಎಂದು ಸಭೆಯನ್ನು ಮುಕ್ತಾಯಗೊಳಿಸಿದರು.

ಕನ್ನಡಿ ಮುಂದೆ

"ವಕ್ರವಕ್ರವಾಗಿರುವುದನ್ನು ಕಂಡರೆ ನನಗೆ ತಡೆಯಲಾರದಷ್ಟು ನಗು ಬರುತ್ತೆ" ಅಂತ ಆತ ಹೇಳಿದರೆ, ಈತ "ಹಾಗಾದರೆ ನೀನು ಹೇಗೆ ಷೇವ್ ಮಾಡಿಕೊಳ್ಳುತ್ತೀಯಾ! ಹಾಗೆ ನಕ್ಕರೆ ಕತ್ತಿ ತಾಕಿ ಫಜೀತಿ ಆಗೋದಿಲ್ಲವೆ?" ಅಂದನಂತೆ.

ಜುಟ್ಟು ಕತ್ತರಿಸಿದ ಗುಟ್ಟು

"ಏನು? ನಿಮ್ಮ ಯಜಮಾನರು ಜುಟ್ಟು ಕತ್ತರಿಸಿಕೊಂಡು ಬಿಟ್ಟಿದ್ದಾರಲ್ಲಾ, ಸಾತಮ್ಮನವರೇ!"

"ಅಯ್ಯೋ! ಬಿಡಿ, ಶಾನಕಷ್ಟ! ಆ ಜುಟ್ಟು ಬಿಟ್ಟುಕೊಂಡು ಮನೆಯೊಳಗೆ ಬರುವುದಕ್ಕೆ ಹೆದರಿ ಸಾಯುತ್ತಿದ್ದರು. ಇನ್ನು ಮೇಲಾದರೂ ಕಾಟ ತಪ್ಪಿತಲ್ಲಾ ಅಂತ ಇವಾರೋ ಏನೋ? ಬರಲಿ, ಬರಲಿ."

ಬೇಕಾಗಿದೆ

ಅನುಭವಸ್ಥರಾದ ಒಬ್ಬರು 'ಡ್ರೈಯಿಂಗ್ ಎಕ್ಸ್‌ಪರ್ಟ್' ಬೇಕಾಗಿದ್ದಾರೆ.......... ಸೂರ್ಯ ಟೆಕ್ಸ್‌ಟೈಲ್ ಕಂಪೆನಿ, ನಾಗಪಟ್ಟಣ.... ಇತ್ಯಾದಿ....

ಬರಹಗಾರ

"ನಮ್ಮ ಕಾಲೇಜಿನಲ್ಲಿದ್ದನಲ್ಲಾ, ಕಾಳ, ಅವನು ಈಗ ದೊಡ್ಡ ಬರಹಗಾರನಾಗಿದ್ದಾನೆ."

"ಏನೇನು ಬರೆಯುತ್ತಾನೆ?"

"ಚಾಕರಿಗಳಿಗೆ ಅರ್ಜಿಗಳು ಬರೆಯುತ್ತಾನೆ; ಸಿಗದೆ ಇದ್ದರೆ, ಮೂಗರ್ಜಿಗಳು!"

ಪೋಲೀಸರ ಎಚ್ಚರಿಕೆ

"ತಾಳಿ, ಪೋಲೀಸಿನವರೇ! ಮನೆಗೆ ಹೋಗಿ ಹೆಂಡತಿಮಕ್ಕಳಿಗೆ ಒಂದು ಮಾತು ಹೇಳಿಬಿಟ್ಟು ಬರ್ತೀನೆ" ಅಂದರೆ, ಪೋಲೀಸಿನವರು, "ಬೇಡಪ್ಪ! ಬೇಡಪ್ಪ! ನೀನಿಲ್ಲೇ ನಿಂತಿರು, ನಾವು ಹೋಗಿ ಹೇಳಿಬಿಟ್ಟು ಬರ್ತೀವೆ; ಮನೆಯೊಳಗೆ ನುಗ್ಗಿ ಹಿತ್ತಲ ಬಾಗಿಲಿಂದ ನೀನು ತಪ್ಪಿಸಿಕೊಂಡುಬಿಟ್ಟರೆ ಆ ಮೇಲೆ ನಮ್ಮ ಗತಿ ಏನು? ಇಲ್ಲೇ ನಿಂತಿರು, ನಾವು ಬರುವ ತನಕ" ಅಂದರಂತೆ.

ತಲೆಕೆಳಗು

ಈಚೆಗೆ ಅಮೇರಿಕಾಗೆ ಹೋಗಿ ಬಂದ ಒಬ್ಬರನ್ನು ಅವರ ಸೋದರ ಮಾವ ಮಾತನಾಡಿಸಿದರಂತೆ. "ಹೋ! ಇಲ್ಲಿ ನಮಗೆ ಹಗಲು ಅನ್ನುವಾಗ ಅಲ್ಲಿ ರಾತ್ರಿ ಅಂತೆ" ಅಂದರಂತೆ. ಆಗ ಅವರು "ಹೂಂ, ಮಾವಯ್ಯ. ಇಲ್ಲಿ ರಾತ್ರಿ ಅನ್ನುವಾಗ

ಅಲ್ಲಿ ಹಗಲು! ಮೊದಲು ಮೊದಲು ನನಗೆ ಹೇಗೋ ಹೇಗೋ ಆಗುವುದು. ಆಮೇಲೆ ಬರಬರುತ್ತಾ ಸರಿಹೋಯ್ತು. ಹೊಂದಿಕೊಂಡು ಬಿಟ್ಟೆ" ಅಂದರಂತೆ.

ಶಕುನ

"ಲೋ! ನಾನು ಮನೆಯಲ್ಲಿ ಇಲ್ಲ ಅಂದಾಗ ಸುಬ್ಬ ಏನಂದ?"

"ಸುಬ್ಬರಾಯರೇ?........ಪರವಾಗಿಲ್ಲ, ಅಮ್ಮ! ಬೆಕ್ಕು ಅಡ್ಡ ಬಂತು, ನಾನು ಹೊರಟಾಗ. ಆದ್ದರಿಂದ ಮನೆಯಲ್ಲಿರುತ್ತಾನೆ, ಅಂತಿದ್ದೆ. ಇಲ್ಲ, ಅಂತೀರಲ್ಲಾ! ಹಾಗಾದರೆ, ಬೆಕ್ಕು ಅಡ್ಡ ಬಂದರೆ ಕೆಟ್ಟ ಶಕುನ ಅನ್ನುವುದು ಸುಳ್ಳು ಅಂದ ಹಾಗಾಯಿತು, ಅಂದರು."



"ನಮ್ಮ ದೇಶದ ಹಲವು ವಿಚಿತ್ರ ಪ್ರಾಣಿಗಳು" ಎಂಬುದರ ಮೇಲೆ ಒಂದು ಸಣ್ಣ ಭಾಷಣ.

ಸಿನಿಮದ ಕಥೆ

"ನಮ್ಮ ಚಿತ್ರ ಎಷ್ಟು ಶ್ಲಾಘನೀಯವಾಗಿದೆ ಎಂಬುದಕ್ಕೆ ಒಂದೇ ಒಂದು ನಿದರ್ಶನ ಸಾಕು! ಅದರ ಕಥೆಯನ್ನು ಅನೇಕ ಕಂಪೆನಿಯವರು ಅನುಕರಣ ಮಾಡಿದ್ದಾರೆ" ಎಂದು ಒಬ್ಬರು ಜಂಭ ಕೊಚ್ಚುತ್ತಿರುವಾಗಲೇ ಮತ್ತೊಬ್ಬರು, "ಹೌದು, ಸ್ವಾಮಿ! ತಮ್ಮ ಚಿತ್ರದ ಕಥೆಯನ್ನು ಚಿತ್ರ ತಯಾರಾಗುವ ಮೊದಲೇ ಅವರು ಅನುಕರಣ ಮಾಡಿದ್ದು ಅಕ್ಷಮ್ಯವಾದದ್ದು" ಅಂದರಂತೆ.

ಸಿಂಹಕ್ಕೆ ಸಾಕು

ಮೈಸೂರಲ್ಲಿ "ಜೂ" ನೋಡುತ್ತಿದ್ದ ಒಬ್ಬರು ಶೆಟ್ಟಿಯಾರ್ರು ಸಿಂಹ ಪಂಜರದ ಹತ್ತಿರ ನಿಂತಿದ್ದರು. ಬೋನಿನ ಮೂಲೆಯಲ್ಲಿ ಒಂದು ಮಾಂಸದ ಮುದ್ದೆ ಬಿದ್ದಿತ್ತು. ಅಲ್ಲಿ ನಿಂತಿದ್ದ ಆಳನ್ನು ಕರೆದು ಶೆಟ್ಟಿಯಾರ್ರು "ಅಷ್ಟು ಮಾಂಸ ಸಾಲದಲ್ಲಾ, ಸ್ವಲ್ಪವೇ ಇದೆಯಲ್ಲಾ" ಅಂದರು. ಅದಕ್ಕವನು, "ತಮಗೆ ಸಾಲದು ಅಂತ ತೋರುತ್ತೆ. ಆದರೆ, ಅದರ ಹೊಟ್ಟೆಗೆ ಅಷ್ಟು ಸಾಕು" ಅಂದನಂತೆ.

ರಜ ಕೊಡಿ

ರಜದ ಮೇಲಿದ್ದ ಪೋಲೀಸ್ ಇನ್ಸ್ಪೆಕ್ಟರೊಬ್ಬರು ಮೊನ್ನೆ ಸುಪ್ರಸಿದ್ಧ ಕೇಡಿ ಒಬ್ಬನನ್ನು ಹಿಡಿದರಂತೆ. ಇನ್ಸ್ಪೆಕ್ಟರುಗಳಿಗೆಲ್ಲ ಹೆಚ್ಚು ರಜ ಕೊಟ್ಟರೆ ಒಳ್ಳೆಯದು.

★

ರಾಜ ರಾಣಿ ಗುಲಾಮು

ಒಂದಾನೊಂದು ಕಾಲಕ್ಕಿಂತ ತುಂಬಾ ಮುಂಚೆ ಒಬ್ಬ ರಾಜ ಇದ್ದ. ಅವನಿಗೆ ಇಸ್ಪೀಟಿನ ಮೇಲೆ ತುಂಬಾ ಆಶೆಯಾದುದರಿಂದ, ಹಗಲೂ ರಾತ್ರಿ ಇಸ್ಪೀಟ್ ಆಡುತ್ತಿದ್ದುದರಿಂದ ಅವನನ್ನು ಇಸ್ಪೀಟ್ ರಾಜ ಎಂದು ಕರೆಯುತ್ತಿದ್ದರು. ಕ್ರಮವಾಗಿ ಅವನ ಪಟ್ಟದರಸಿಗೆ ಇಸ್ಪೀಟ್ ರಾಣಿ ಎಂದು ಹೆಸರಿಟ್ಟಿದ್ದರು. ತನ್ನ ಊರಿನ ಪ್ರಜೆಗಳ ಸಂಘದ ವರದಿಗಳನ್ನು ನೋಡಿದ ಕೂಡಲೆ ರಾಜ ರಾಣಿಯರು ಕಾಶೀಯಾತ್ರೆಯ ನೆಪಮಾಡಿಕೊಂಡು ರಾಜ್ಯ ಬಿಟ್ಟುಬಿಟ್ಟು ಎಲ್ಲಾ ರಾಜರಂತೆಯೇ ವಿಲಾಯಿತಿಗೆ ಹೋಗಿ ಅಲ್ಲಿಯೇ ವಾಸಮಾಡಲಾರಂಭಿಸಿದರು. ಹೋಗುವಾಗ ದಾನಧರ್ಮಕ್ಕೆಂದು ಆದಷ್ಟು ಹಣ ಒಡವೆ ವಸ್ತುಗಳನ್ನು ರಾಜ್ಯದಿಂದ ತೆಗೆದುಕೊಂಡು ಬಂದಿದ್ದರಾದ ಕಾರಣ ಕೆಲವು ತಿಂಗಳು ವಿಲಾಯಿತಿಯಲ್ಲಿ ಸುಖ ಜೀವನ ನಡೆಸಿದರು. ಕೈಲಿದ್ದ ಹಣವೆಲ್ಲವೂ ಖರ್ಚಾಗಿ ಹೋಗಿತ್ತು. ಇನ್ನೇನು ಮುಂದೆ ಜೀವನೋಪಾಯಕ್ಕೆ ಗತಿ ಎನ್ನುವ ಹೊತ್ತಿಗೆ ವಿಲಾಯಿತಿಯಲ್ಲಿ ದೇವರ ದಯೆಯಿಂದ ಯುದ್ಧ ಆರಂಭವಾಯಿತು. ಹೀಗಾಗಿ ರಾಜನು ಐವತ್ತು ವರ್ಷ ಮೀರಿದವನಾದುದರಿಂದ ತಾನಿದ್ದ ಹಳ್ಳಿಯಲ್ಲಿಯೇ ಊರ ಕಾವಲು ಸಂಘಕ್ಕೆ ಸೇರಿಕೊಂಡು ಸರ್ತಿಯ ಪ್ರಕಾರ ಮನೆಯ ಸೂರಿನ ಮೇಲೆ ನಿಂತು ಶತ್ರು ಮಿತ್ರ ವಿಮಾನಗಳ ಬರುವಿಕೆಯನ್ನೇ ಎದುರು ನೋಡುತ್ತಾ ಕಾಲ ಕಳೆಯುತ್ತಿದ್ದನು. ರಾಣಿಯಾದರೋ ಮನೆಯಲ್ಲೇ ಅಡಿಗೆ ಕೆಲಸ ಮಾಡಲು ಕಲಿತುಕೊಂಡು, ಸಿಹಿ ಇಲ್ಲದೆ ಒಬ್ಬಟ್ಟು ಮಾಡುವುದನ್ನೂ, ತರಕಾರಿ ಇಲ್ಲದೆ ಕೂಟು ಮಾಡುವುದನ್ನೂ, ಅಕ್ಕಿ ಇಲ್ಲದೆ ಊಟ ಮಾಡುವುದನ್ನೂ ಕಲಿತಳು.

—ಓಹೋ ಇನ್ನೊಂದು ಸಮಾಚಾರ ಹೇಳುವುದನ್ನೇ ಮರೆತಿದ್ದೆ. ಇವರಿಬ್ಬರ ಜತೆಯಲ್ಲೇ ಇವರ ಗುಲಾಮನೂ ವಿಲಾಯಿತಿಗೆ ಬಂದಿದ್ದ. ಅವನಿಗೆ ಗುಲಾಮು ಎಂಬ ಹೆಸರನ್ನೇ ಇಟ್ಟಿದ್ದರು. ಯುದ್ಧಕಾಲದಲ್ಲಿ ಗುಲಾಮನ ಸುಖದುಃಖ ಯಾರಿಗೆ ಬೇಕು. ಹೀಗಾಗಿ ಅವನು ಬಂದಿದ್ದನ್ನೂ ಹೇಳಲು ಮರೆತಿದ್ದೆ. ಅವನೂ ರಾಜ ರಾಣಿಯರೊಂದಿಗೆ ವಾಸಿಸುತ್ತಿದ್ದರೂ, ದೇಹದಾರ್ಢ್ಯವಿದ್ದವನಾದುದರಿಂದ ಸೈನ್ಯದಲ್ಲಿ ಹೆಚ್ಚು ಸಂಬಳಕ್ಕೆ ಸೇರಿಕೊಂಡಿದ್ದನು. ಹಾಗಾಗಿ ಗುಲಾಮನು ಈ ಸಂಸಾರದಲ್ಲಿ ದಿನದಲ್ಲಿ ಬಹಳ ಹೊತ್ತು ಗೈರುಹಾಜರು.

ವಿಲಾಯಿತಿಯಲ್ಲೆಲ್ಲಾ ಆಹಾರದ ಅಭಾವವು ಹೆಚ್ಚಾಯಿತು. ಅದನ್ನು ಸರಿಪಡಿಸಲೋಸುಗ ಸರಕಾರದವರು ಆಹಾರ ಹಂಚುವ ಸಂಸ್ಥೆಯೊಂದನ್ನು ಸ್ಥಾಪಿಸಿ ಆಹಾರದ ಅಭಾವವನ್ನು ಇನ್ನೂ ಹೆಚ್ಚು ಮಾಡಿದ್ದರು. ಹೀಗಿರುವಾಗ ರಾಜನಿಗೆ ತನಗೆ ತನ್ನೂರಿನಲ್ಲಿ ದೊರಕುತ್ತಿದ್ದ ರುಚಿಕರವಾದ ಆಹಾರ ಪದಾರ್ಥಗಳು ಮರೆಯುವುದು ಹಾಗಿರಲಿ. ಅನ್ನ ಸಾರು ಕಾಣುವುದು ಹಾಗಿರಲಿ. [illegible] ಹೊಟ್ಟೆ ದೊರಕುವುದೂ, ಹೊಟ್ಟೆ ತುಂಬಾ ದೊರಕುವುದೂ ಕಷ್ಟವಾಗಿತ್ತು. ಹೀಗಾಗಿ ನಾಲ್ಕು

ತಿಂಗಳಾಗಿತ್ತು. ಅಂದ ಮೇಲೆ ತನ್ನ ರಾಜ್ಯವನ್ನು ಜ್ಞಾಪಿಸಿಕೊಂಡಾಗ, ತನ್ನ ಅಡಿಗೆಯವನ ಕಲಾಕೃತಿಗಳನ್ನು ನೆನೆಸಿಕೊಂಡಾಗ ಅವನ ಬಾಯಲ್ಲಿ ನೀರೂರಿ ಚಪ್ಪರಿಸುವಂತಾಗಿ ನಿಟ್ಟುಸಿರು ಬಿಡುವಂತಾದುದು ಏನೇನೂ ಆಶ್ಚರ್ಯಕರವಲ್ಲ.

ಒಂದು ದಿನ, ಸೂರ್ಯನು ಹೊಸ ಶಾಸನದ ರೀತಿಯಾಗಿ ಒಂದು ಗಂಟೆ ಮುಂಚೆಯೇ ಎದ್ದ ಒಂದು ದಿನ, ರಾಣಿಯು ಅಡಿಗೆ ಮನೆಯಲ್ಲಿ ಹಳೇ ಡಬ್ಬಗಳನ್ನು ಹುಡುಕುತ್ತಿದ್ದಾಗ, ಒಂದು ಸಣ್ಣ ಡಬ್ಬದಲ್ಲಿ ಹುಣಿಸೆ ಗೊಜ್ಜಿನ ಪುಡಿ ಇದ್ದುದನ್ನು ಕಂಡಳು. ತಾನು ಅದನ್ನೂ ಕಾಶೀ ಯಾತ್ರೆಗಾಗಿ ಹೊರಟಾಗ ಮುಚ್ಚಿಟ್ಟು ತಂದುದನ್ನೂ ಜ್ಞಾಪಿಸಿಕೊಂಡಳು. ಹಾಗೆಯೇ ಹುಡುಕಿದಾಗ ಇನ್ನೊಂದು ಡಬ್ಬದಲ್ಲಿ ಅಕ್ಕಿಯು ದೊರಕಿತು. ಕೊಬ್ಬಿದ ಹಂದಿಗಳಿರುವ ವಿಲಾಯಿತಿಯಲ್ಲಿ ಜಿಡ್ಡಿಗೇನು ಕಡಿಮೆ. ಅಂತೂ ಇಂತೂ ಹುಳಿಯನ್ನ ಇಂದು ಮಾಡಲೇ ಬೇಕು, ಗಂಡನಿಗೆ ತಿಳಿಯದಂತೆ ಮಾಡಿ, ಸ್ವಲ್ಪ ಈರುಳ್ಳಿಯನ್ನು ಕದ್ದಾದರೂ ಸಂಪಾದಿಸಿ, ರಾತ್ರಿ ಊಟಕ್ಕೆ ಗಂಡನಿಗೆ ಬಡಿಸಬೇಕು. ಅವನೊಡನೆ ತಾನೂ ತಿಂದು, ಅವನ ಅಮಿತಾನಂದದಲ್ಲಿ ತಾನೂ ಭಾಗಿಯಾಗಿ ಹಿಂದಿನ ಸವಿಕನಸುಗಳನ್ನು ಒಮ್ಮೆಯಾದರೂ ನೆನಸನ್ನಾಗಿ ಮಾಡಬೇಕು ಎಂದು ಮನಸ್ಸಿನಲ್ಲಿಯೇ ನಿಶ್ಚಯಿಸಿದಳು. ಪಕ್ಕದ ಮನೆಗೆ ಹೋಗಿ ಆ ಮಾತು ಈ ಮಾತು ಆಡುತ್ತಾ ಮೂರು ಈರುಳ್ಳಿ ಕದ್ದು ತಂದಳು. ಗಂಡನು ತನ್ನ ಸಹರಿ ಕಾರ್ಯಾಚರಣೆಯನ್ನು ಮಾಡಹೋದಾಗ, ಸಂಜೆಗೆ ಮೊದಲೇ ಹುಳಿಯನ್ನವನ್ನು ಮಾಡಲಾರಂಭಿಸಿದಳು. ರಾತ್ರಿ ಏಳು ಏಳೂವರೆ ಗಂಟೆಗೆ ಗಮಗಮಿಸುವ ಹುಳಿಯನ್ನವನ್ನು ಡಬ್ಬದ ಮೇಲಿನ ಚೀಟಿಯಲ್ಲಿ ಹೇಳಿದಂತೆಯೇ ಮಾಡಿಟ್ಟಳು. ಒಂದು ಪಾತ್ರೆಯಲ್ಲಿದನ್ನಿಟ್ಟು ಇನ್ನೊಂದು ಪಾತ್ರೆಯನ್ನು ಮುಚ್ಚಿ ತಾನು ಹಾಗೆಯೇ ನೆರೆ ಮನೆಗೆ ಬಂದು ಅರ್ಧ ಗಂಟೆ ಹರಟೆ ಹೊಡೆದು ಬರೋಣವೆಂದು ಹೊರಟಳು.

ಸಂಜೆ ಎಂಟು ಗಂಟೆಯಾಗುತ್ತ ಬಂತು. ಅಂದು ಏನೂ ಕೆಲಸವಿಲ್ಲದ ಕಾರಣ, ರಜ ದೊರೆತುದರಿಂದ, ಗುಲಾಮನು ತನ್ನ ಸೈನ್ಯ ಶಿಬಿರದಿಂದ, ಒಡತಿ ಒಡೆಯರನ್ನು ಒಮ್ಮೆ ನೋಡಿ ಹೋಗೋಣ ಎಂದು ಅವರ ಮನೆಗೆ ಬಂದನು. ಮನೆಯಲ್ಲಿ ಯಾರೂ ಇರಲಿಲ್ಲ. ಮುಂದಿನ ಕೋಣೆಯಲ್ಲಿ ರೇಡಿಯೋ ಯಂತ್ರ ಒಂದಿತ್ತು. ಅದನ್ನು ತಿರುಗಿಸಿದನು. ಯಾವುದೋ ಒಂದು ಆಕಾಶವಾಣಿಯು ಕೇಳಬಂತು. ಏನೇ ಬರಲಿ ಅದನ್ನು ಅನುಭವಿಸಲು ಸಿದ್ಧರಿದ್ದೇವೆ. ನಮ್ಮ ದೇಶಕ್ಕಾಗಿ, ನಮ್ಮ ಊರಿಗಾಗಿ, ನಮ್ಮವರಿಗಾಗಿ, ನಮಗಾಗಿ, ನಮ್ಮ ಹೊಟ್ಟೆಗಾಗಿ ಸಾಯುವತನಕ ಹೋರಾಡುತ್ತೇವೆ ಎಂಬ ವಾಕ್ಯಗಳು ಕೇಳಿ ಬಂತು. ಆ ವೇಳೆಗೆ ಎಲ್ಲಿಂದಲೋ ಗಮಗಮ ವಾಸನೆಯು ಬಂತು. ಮೊಟ್ಟಮೊದಲು ಗುಲಾಮನಿಗೆ ಅನುಮಾನ ಬಂತು. ಹೊಸ ತೆರನಾದ ರೇಡಿಯೋ ಯಂತ್ರಗಳು, ಅಶರೀರ ವಾಕ್ಯಗಳನ್ನು ಕೇಳಿ ಬರುವಂತೆ ಮಾಡುತ್ತದೆ, ತೆರತೆರನಾದ ವಾಸನೆಗಳನ್ನೂ ಹೊರದೂಡುತ್ತದೋ ಎಂದು. ಆದರೆ ಹಾಗೆಯೇ ಪತ್ತೆಹಚ್ಚಿದ್ದರಲ್ಲಿ

ರಾಜ ರಾಣಿ ಗುಲಾಮ

ಅಡಿಗೆ ಮನೆಯ ಕಡೆಯಿಂದ ವಾಸನೆ ಬಂದುದು ಗೊತ್ತಾಯಿತು. ರೇಡಿಯೋವನ್ನು ಒಮ್ಮೆ ಮೂಸಿ ನೋಡಿದನು, ಸತ್ತ ಜಿರಳೆಗಳ ವಾಸನೆ. ಓಹೋ ಈ ವಾಸನೆಯು ಅಡಿಗೆ ಮನೆಯದೇ ಎಂದು ನಿರ್ಧರಿಸಿಕೊಂಡನು. ಅಡಿಗೆ ಮನೆಗೆ ಒಮ್ಮೆಲೇ ಅವನ ಕಾಲುಗಳು ಅವನನ್ನೂ ಅವನ ಮೂಗನ್ನೂ ವಾಸನೆಯ ಜಾಡಿನಲ್ಲೇ ಎಳೆದುಕೊಂಡು ಹೋದುವು. ಎರಡು ನಿಮಿಷದಲ್ಲೇ ಹುಳಿಯನ್ನದ ಪಾತ್ರೆಯು ಮೂಗಿಗೆ ತೋರಿ ಕಣ್ಣಿಗೆ ಕಾಣಿಸಿತು. ಪಾತ್ರೆಯನ್ನು ತೆರೆದು ನೋಡಿದ. ಬಿಸಿಬಿಸಿಯಾದ ಹುಳಿಯನ್ನ ಮೂಗಿನ ಶಿಲೆ ಒಡೆಯುವಂತಹ ಗಮಗಮ ವಾಸನೆ. ಅವನ ಮನಸ್ಸು ಸಮಾಧಿ ಹೊಂದಿತು. ಯಾರದು ಹುಳಿಯನ್ನ, ಯಾಕೆ ಮಾಡಿದ್ದಾರೆ, ಯಾರಿಗೋಸ್ಕರ, ಒಂದೂ ಅವನಿಗೆ ತೋರಲಿಲ್ಲ. ಅವನ ಕೈ ಬಾಯಿಗಳು ಪಾತ್ರೆಯನ್ನು ಬರಿದು ಮಾಡಿದುವು. ಈ ಹುಳಿಯನ್ನ ಸಮಾಧಿಯಲ್ಲೇ ಇನ್ನೂ ಗುಲಾಮನಿದ್ದ.

ಮನೆಯಲ್ಲಿ ರೇಡಿಯೋ ಶಬ್ದವಾಗುತ್ತಿದ್ದುದು ಹರಟೆ ಹೊಡೆಯುತ್ತಿದ್ದ ರಾಣಿಗೆ ಕಡೆಗೂ ಕೇಳಿ ಬಂತು. ಯಾರಿರಬಹುದು! ಗಂಡನೇ ಇರಬೇಕು ಎಂದು ಮೊದಲ ಯೋಚನೆ. ಗಂಡನಿಗೆ ರೇಡಿಯೋ ಕಂಡರೆ ಆಗುವುದಿಲ್ಲ ಎಂಬುದು ತಕ್ಷಣ ಹೊಳೆಯಿತು. ಯಾರೋ ಸ್ನೇಹಿತರು ಬಂದಿರಬಹುದು ಎಂದುಕೊಂಡು ಬೇಗ ಹರಟೆ ಮುಗಿಸಿ ಮನೆಗೆ ಬಂದಳು. ಅವಳು ಬರುವ ಹೊತ್ತಿಗೆ ರಾಜನು ತನ್ನ ಪಹರೆ ಕೆಲಸವನ್ನು ಮುಗಿಸುವ ಹೊತ್ತಿಗೂ ಸರಿಸಾಟಿಯಾಯಿತು. ಇಬ್ಬರೂ ಒಟ್ಟಿಗೇ ಹೆಬ್ಬಾಗಿಲಿಗೆ ಕಾಲಿಟ್ಟರು. ವಕ್ರವಕ್ರವಾಗಿ ಹಾಡುತ್ತಿದ್ದ ರೇಡಿಯೋ. ಹುಳಿಯನ್ನದ ಮಸಕು ಮಸಕು ವಾಸನೆ. ಇಬ್ಬರೂ ಅಡಿಗೆಯ ಮನೆಗೆ ಮಾತಿಲ್ಲದೆ ಒಟ್ಟಿಗೇ ನುಗ್ಗಿದರು. ಪಾತ್ರೆಯನ್ನು ಖಾಲಿ ಮಾಡಿ ಮೆಲಕು ಹಾಕುತ್ತ ಕುಳಿತಿದ್ದ ಗುಲಾಮನನ್ನು ಕಂಡರು.

ಇನ್ನು ಮುಂದಿನ ಕತೆ ಬಹಳ ದುರಂತವಾದುದು. ಅದರಲ್ಲಿ ಬಹಳ ಮಟ್ಟಿಗೆ ಕ್ರೌರ್ಯ, ಹಿಂಸೆ, ಒದೆಯುವಿಕೆ, ಜಿಗುಟುವಿಕೆ, ಉಗುಳುವಿಕೆ ಇವುಗಳೆಲ್ಲವೂ ಉಂಟು. ಆದುದರಿಂದ, ಚಿಕ್ಕ ವಯಸ್ಸಿನವರೂ ಈ ಕತೆಯನ್ನು ಓದಬಹುದಾದ ಕಾರಣ, ಕತೆಯ ಕೊನೆಯನ್ನು ಹೇಳದೆ ಇರುವುದೇ ಮೇಲು.

ಆದರೆ ಆ ಕಾರಣದಿಂದಲೇ ನೋಡಿ, ಇಂದಿಗೂ ಗುಲಾಮನ ಮೇಲೆ ರಾಜ ಬಿದ್ದರೂ ಸರಿ ರಾಣಿ ಬಿದ್ದರೂ ಸರಿ, ಗುಲಾಮನ ಆಟದಲ್ಲಿ ಗುಲಾಮನೇ ಗೆಲ್ಲುವನು. ಏಕೆಂದರೆ ತಿಂದು ತೇಗಿ ತಡೆದುಕೊಳ್ಳಬಲ್ಲನು.

ಮದುವೆಗೆ ಮುಂಚೆ; ಮೂರು ಅಂಕಗಳು

೧

ಪ್ರತಿ ದಿನವೂ ನಮ್ಮ ಮನೆಯಲ್ಲಿ ನನಗೂ ನನ್ನ ತಾಯಿಗೂ ಜಗಳ! ಕಾರಣ, ನನ್ನ ಮದುವೆ ವಿಚಾರ. ನನಗೆ ಮದುವೆ ಮಾಡಬೇಕು, ಸೊಸೆ ಮನೆಗೆ ಬರಬೇಕು, ನಾವಿಬ್ಬರೂ ನಲಿಯುವುದನ್ನು ಕಂಡು ತಾವು ಒಲಿಯಬೇಕು—ಎಂಬುದೇ ತಂದೆತಾಯಿಗಳ ಹಟ !

"ಈಗ ಬೇಡಮ್ಮ! ಮುಂದಿನ ವರ್ಷ ನೋಡೋಣ" ಅಂತ ನಾನು ರಾಗ ಎಳೆದರೆ, "ಮುಂದಿನ ವರ್ಷ ತಾನೆ ಯಾಕೆ? ಇನ್ನೂ ಹತ್ತು ವರ್ಷವಾಗಲಿ! ನಿಮ್ಮ ಚಿಕ್ಕಪ್ಪನ ಹಾಗೆ ಬೆಳೆದು ಕೂತು ಬಿಡು; ಅಹಹ! ಆ ಮೇಲೆ ಹೆಣ್ಣು ಕೊಡುವವರಿಗೂ ಚೆನ್ನಾಗಿ ಕಾಣಿಸುತ್ತೀಯಾ" ಅಂತ ಜಗಳಕ್ಕೆ ಶುರು, ನನ್ನ ತಾಯಿ ! ಹಾಗೂ ಹೀಗೂ ನಾನೇ ಸೋತೆ. ಅವರ ಹಟ ಸಾಧನೆಯ ಒಂದನೆಯ ಅಂಕ ಅಲ್ಲಿಗೆ ಮುಕ್ತಾಯ !

೨

ನನ್ನ ಜಾತಕವನ್ನು ಪ್ರತಿ ಮಾಡಿ ಸಿನೆಮಾ ಚೀಟಿಗಳ ಹಾಗೆ ಕೇಳಿದವರಿಗೆಲ್ಲಾ ಹಂಚುತ್ತಾ ಬಂದರು, ನನ್ನ ತಂದೆಯವರು. ಹಲವಾರು ಸಲ ಟಪ್ಪಾಲು ಚಾರ್ಜು ಜೇರೆ ನಮ್ಮ ತಲೆ ಮೇಲೆಯೇ ಬಿತ್ತು. ಸಿನೆಮಾ ಪ್ರೊಪ್ರೈಟರುಗಳಂತೆಯೇ ನಾವೂ ಕೂಡ ಸ್ತ್ರೀ ಪರೀಕ್ಷೆಯ ಕೆಲಸದಲ್ಲಿ ನಿರತರಾದೆವು. ಹುಡುಗಿಯರನ್ನು ನಮ್ಮ ಮನೆಗೆ ಕರೆಸಿಕೊಂಡು ಹಾಡು ಹೇಳಿಸಿ ಹಾರ್ಮೋನಿಯಂ ಪಿಟೀಲು ಇತ್ಯಾದಿಗಳನ್ನು ನುಡಿಸಿಸಿ ಎತ್ತರ ಗಾತ್ರ ಬಣ್ಣ ಬಿನ್ನಾಣಗಳನ್ನು ನೋಡಿದೆವು. ನನ್ನ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವನ್ನುಂಟುಮಾಡುವ ಕನ್ಯೆ ದೊರೆಯುವುದಾದರೆ, ತಮ್ಮ ಆಸೆ ಕೈಗೂಡುತ್ತಲ್ಲಾ ಎಂಬುದು ಅವರ ತವಕ.

ಕೆಲ ದಿನಗಳಲ್ಲಿ ಒಂದೆರಡು ವಿಚಾರಗಳು ನನಗೂ ಹೊಳೆಯಿತು.

ಹುಡುಗಿಯರನ್ನು ಯಾರು ಕರೆದುಕೊಂಡು ಬಂದರೂ ಕೂಡ, ಜೊತೆಗೆ ಅಕ್ಕ ತಂಗಿಯರು ಸ್ನೇಹಿತರು ಇವರನ್ನೂ ತರುತ್ತಾರೆ. ಸುಣ್ಣ ಬಣ್ಣ ಸಿಂಗಾರ ಬಂಗಾರಗಳನ್ನು ಹಚ್ಚಿ ತರುತ್ತಾರೆ. ರಂಗಸ್ಥಳಕ್ಕೆ ಬರುವ ಸ್ತ್ರೀ ಪಾತ್ರದವರಂತೆ ಅಲಂಕಾರ ಮಾಡುತ್ತಾರೆ. ಸಾಯಂಕಾಲ ಏಳು ಏಳೂವರೆ ಗಂಟೆಗೆ ಸರಿಯಾಗಿ ವಿದ್ಯುತ್ ದೀಪದ ಬೆಳಕಿನಲ್ಲಿ ತಂದು ನಿಲ್ಲಿಸುತ್ತಾರೆ. ಆದ್ದರಿಂದ ಅವರು ನಮ್ಮ ಮನೆಗೆ ಬರುವ ಮೊದಲು ನಾನೇ ಅವರಿಗೆ ತಿಳಿಯದಂತೆ ಹುಡುಗಿಯ ಸ್ವಾಭಾವಿಕವಾದ ಸ್ವರೂಪ ಲಕ್ಷಣಗಳನ್ನು ತಿಳಿದುಕೊಂಡುಬಿಡುವುದು ಉತ್ತಮವೆಂದೆಣಿಸಿದೆ.

ಒಂದು ದಿನ ಸಂಜೆ ನನ್ನ ತಾಯಿ "ರಾಮೂ! ಇವತ್ತು ಚಾಮರಾಜನಗರದಿಂದ ಯಾರೋ ಹೆಣ್ಣು ಕರೆದುಕೊಂಡು ಬರುತ್ತಾರಂತೆ ಬಸ್ಸಿನಲ್ಲಿ........ರಿಟೈರ್ಡ್ ಪೋಲೀಸ್ ಇನ್ಸ್ಪೆಕ್ಟರು! ಮನೆಯಲ್ಲೇ ಇರು........ಅಥವಾ, ಆಟಗೀಟ ಮುಗಿಸಿಕೊಂಡು ಬೇಗನೆ ಬಂದು ಬಿಡು" ಅಂದರು.

"ಆಗಲಮ್ಮ!" ಅಂತ ಬೈಸಿಕಲ್ಲು ಹತ್ತಿ ಒತ್ತಿದೆ ಬಸ್ ಸ್ಟಾಂಡಿಗೆ. ಅಲ್ಲೇ ನಿಂತಿದ್ದೆ. ಚಾಮರಾಜನಗರದ ಪಾರ್ಟಿ ಬಂದಿಳಿಯಿತು ಬಸ್ಸಿನಲ್ಲಿ. ಆಹಾ! ಸ್ಫುರದ್ರೂಪಿ! ಕಂಚೀ ಕರು, ಡನ್‌ಲಪ್ ಡಾಟೆರ್, ಕೃಷ್ಣವೇಣಿ, ಗಜಗಮನೆ, ಬಸ್ಸಿನಿಂದ ಇಳಿಯುವುದಕ್ಕೇ ತಾಪತ್ರಯ ಮಹರಾಯಗಿತ್ತಿಗೆ! "ಇಲ್ಲೇ ಹೇಳಿ ಬಿಡಲೇ ಜಡ್ಜ್‌ಮೆಂಟ್?" ಅಂತ ಅನುಮಾನಿಸಿದೆ. "ಪಾಪ! ದೂರದಿಂದ ಬಂದಿದ್ದಾರೆ. ಹೆಣ್ಣು ಹೆತ್ತವರ ಪಾಡು ಅವರಿಗೇ ಗೊತ್ತು. ಮನೆಗೆ ಬಂದು ಒಂದಿಷ್ಟು ಫಲಹಾರವನ್ನಾದರೂ ತಿಂದು ಹೋಗಲಿ" ಅಂತ ಸುಮ್ಮನಾದೆ. ಮತ್ತೆ ವಾಹನವನ್ನೇರಿ ಬೇಗ ಬೇಗ ಮನೆ ಕಡೆ ತೆರಳಿದೆ. ಏನೂ ಅರಿಯದವನ ಹಾಗೆ ಕೊಠಡಿಯಲ್ಲಿ ಕೊರವಂಜಿ ಓದುತ್ತಾ ಕುಳಿತೆ.

"ರಾಯರೇ!" ಅಂದರು ಯಾರೋ ಹೊರಗಡೆ. ನನ್ನ ತಂದೆ ಇನ್ನೂ ಮಾತಿಗೆ ಬಂದಿರಲಿಲ್ಲ. "ಆ" ಅಂತ ನಾನು ಒಂದು ಕಿವಿಯನ್ನು ಮುಂದಕ್ಕೆ ಚಾಚಿದೆ. "ರಾಯರು ಇದ್ದಾರ್ಯೆ?" ಅಂದರು ಬಡಪಾಯಿ ಇನ್ಸ್‌ಪೆಕ್ಟರು. ನಾನು ಎದ್ದು ಅವರೆದುರು ನಿಂತು, "ಒ-ಒ-ಒ-ಒಳಕ್ಕೆ ಬ-ಬ-ನ್ನಿ ಇನ್ನೇನು ಬ-ಬ-ಬರೋಣಮ್ಮ!" ಅಂದೆ, ಬೇಕು ಅಂತ. ಅವರು ನನ್ನ ಬಾಯನ್ನೇ ನೋಡುತ್ತಾ ಮೆಲ್ಲಗೆ ಕೊಠಡಿಯೊಳಕ್ಕೆ ಬಂದರು. ನಾನು ಒಂದು ಕುರ್ಚಿಯನ್ನು ತೋರಿಸುತ್ತಾ "ಕೂ-ಕೂ-ಕೂತು ಕೊ-ಕೊಳ್ಳಿ" ಅಂದೆ. ಕೂತುಕೊಂಡರು. ಅಷ್ಟರಲ್ಲೇ ನನ್ನ ತಾಯಿ ಹೆಂಗಸರನ್ನು ಸುಸ್ವಾಗತಿಸಿ ಒಳಕ್ಕೆ ಕರೆದುಕೊಂಡು ಹೋದರು. ಇನ್ಸ್‌ಪೆಕ್ಟರು ತಮ್ಮ ಅನುಮಾನ ಪರಿಹಾರಾರ್ಥವಾಗಿ "ರಾಯರು ನಿಮಗೇನಾಗಬೇಕು?" ಅಂದರು. "ತ-ತ-ತ-ತಂದೆ" ಅಂದೆ, ಅದೇ ವರಸೆಯಲ್ಲಿ. "ನಿಮ್ಮ ಹೆಸರು?" ಅಂದರು. "ರಾ-ರಾ-ರಾ-ರಾಮ ರಾ-ರಾ-ಯ" ಅಂದೇ, ಸಂಕೋಚಪಡದೆ.

ಯಾಕೋ ಅವರು ಎದ್ದು ನಿಂತುಕೊಂಡರು. "ನಾವು ಬರುತ್ತೇವೆ; ರಾಯರು ಬಂದಾಗ ತಿಳಿಸಿ ಬಿಡಿ, ನಾಗರಾಜರಾಯರು ಬಂದಿದ್ದರು, ಕಾಗದ ಬರೆಯುತ್ತಾರಂತೆ, ಅಂತ" ಎಂದು ಹೇಳಿ, ಹೆಂಗಸರಿಗೆ ಹೊರಡಲು ಸಂಜ್ಞೆ ಮಾಡಿದರು. ಕಾಫೀನೂ ಮುಟ್ಟಲಿಲ್ಲ, ಮಹಾರಾಯ!

ಹೀಗೆ, ಸುಮಾರು ಹತ್ತು ಹನ್ನೆರಡಾಯಿತು. ಪ್ರತಿಯೊಬ್ಬರಲ್ಲಿ ಏನಾದರೂ ಒಂದು ಕೊರತೆ; ಒಂದು ಕುಂದು. "ಏನೋ ಅಪ್ಪ! ಶಾಮರಾಯರ ಮಗಳನ್ನ ಒಪ್ಪಿದ್ರೆ ಚೆನ್ನಾಗಿತ್ತು" ಅಂದರು ತಾಯಿ "ಏನಮ್ಮ! ಒಳ್ಳೇ ಮಾತು ಹೇಳ್ತೀಯಮಾ, ನೀನು! ಕಿವಿಯಿಂದ ಕಿವಿ ವರೆಗೆ ಅವಳು ಬಾಯಿ ತೆರೆದಾಗ ನೀನೇ ಬೆಚ್ಚಿ ಬಿದ್ದೆ! ಅವಳೇನಾದರೂ ಸೊಸೆಯಾಗಿ ಬಂದು ಬಿಟ್ಟರೆ ನಿನಗೆ ಬೆವರು ಹಿಡಿಸಿ ಬಿಡ್ತಾಳು. ಆ ಮೇಲೆ ಅಣ್ಣ ಮಠಿಯಾಳಕ್ಕೆ ಹೊರಡಬೇಕಾಗುತ್ತೆ, ಅಷ್ಟೆ" ಅಂದೆ. "ಶಿಷ್ಟರಾಯರ ಮಗಳು ಪರವಾಗಿರಲಿಲ್ಲ" ಅಂದರು. "ಅದರ ಮೂಗು, ಹಂದಿ ಮರಿಯ ಹಾಗೆ ಇದೆಯಲ್ಲಾ, ಅದನ್ನೇನು ಮಾಡುತ್ತೀ?" ಅಂದೆ. "ಹೋಗೋ!

ಮನ್ಮಥ! ನಿನಗೆ ಯಾವ ರಂಭೆ ಕಾದಿದ್ದಾಳೋ, ಅವಳು ಯಾವ ಹೊತ್ತು ಬರುತ್ತಾಳೋ ನಾನು ನೋಡಿ ಕಾಣೆ" ಅಂದರು. ಅಲ್ಲಿಗೆ ಎರಡನೆಯ ಅಂಕ ಮುಗಿಯಿತು.

೩

"ರಾಮೂ! ಸುಬ್ರಾಯರಂತೆ! ಜಂಟಿ ಕೊಪ್ಪಲಲ್ಲಿದ್ದಾರಂತೆ, ಬೆಳಿಗ್ಗೆ ಬಂದಿದ್ದರು. ಅವರೊಂದಿಗೆ ಮಾತಾಡಿಕೊಂಡು ಹೋದರು. ಜಾತಕವೇನೋ ಕೂಡಿದೆ ಅಂತೆ. ಆದರೆ ನೀನು ಹೂಂ ಅಂದರೆ ತಾನೆ? ನಾಳೆ ಬೆಳಿಗ್ಗೆ ಬರುತ್ತಾರಂತೆ. ಕೊಂಚ ದೊಡ್ಡ ಮನಸ್ಸು ಮಾಡೋ" ಅಂದರು, ನನ್ನ ತಾಯಿ. "ಮನೆಯಲ್ಲೇ ಇರು!" ಅಂತ ಎಚ್ಚರಿಸಿದರು. "ಹ್ಞು" ಅಂದೆ.

ಸಾಯಂಕಾಲವೇ ಸೈಕಲ್ಲು ಹತ್ತಿ ಜಂಟಿ ಕೊಪ್ಪಲೆಲ್ಲಾ ಅಲೆದಾಡಿ ಸುಬ್ರಾಯರ ಮನೆ ಪತ್ತೆ ಮಾಡಿದೆ. ಮನೆ ಅಂಗಳದಲ್ಲಿ ೧೦-೧೨ ವರ್ಷದ ಒಂದು ಹುಡುಗಿ ನಲ್ಲಿಯಿಂದ ನೀರು ಹಿಡಿಯುತ್ತಿದ್ದಳು. "ಯಾರು?" ಅಂದಳು. ಅವಳ ಆ ಪ್ರಶ್ನೆಗೆ ನಾನು ತಯಾರಾಗಿರಲಿಲ್ಲ. ಏನು ಹೇಳುವುದಕ್ಕೂ ತಕ್ಷಣ ತೋಚಲಿಲ್ಲ. ಪುನಃ ಆ ಹುಡುಗಿ "ಯಾರ ಮನೆ ಬೇಕಾಗಿತ್ತು?" ಅಂದಳು. "ಸುಬ್ರಾಯರ ಮನೆ!" ಅಂದೆ. "ಅವರು ಮನೆಯಲ್ಲಿಲ್ಲ. ಏಳು ಗಂಟೆಗೆ ಬರುತ್ತಾರೆ ಆಫೀಸಿನಿಂದ! ಏನು ಹೇಳಬೇಕಾಗಿತ್ತು?" ಅಂದಳು. ಆಗ, ಮನೆ ಒಳಗಿಂದ "ಯಾರೇ, ರೋಜಿ!" ಎಂಬ ಒಂದು ಇಂಪಾದ ಧ್ವನಿ ಕೇಳಿ ಬಂತು. ೧೮-೧೯ ವರ್ಷದ ಒಂದು ಮಿಂಚಿನ ಬಳ್ಳಿ ಬಾಗಿಲಿಲ್ಲಿ ನಿಂತುಕೊಂಡು, "ಯಾರ್ರಿ ನೀವು? ಏನು ಬೇಕಾಗಿತ್ತು?" ಅಂದಿತು. "ಏನೂ ಇಲ್ಲ, ನಾವು ಇಷ್ಟು ಗಡಂಗಿನವರು! ಎಷ್ಟು ಮೂಟೆ ಬೇಕು ಅಂತ ಮನೆಯಲ್ಲಿ ವಿಚಾರಿಸಿ ಬಿಟ್ಟು ಕಳುಹಿಸಿ ಕೊಡಿ, ಅಂತ ಸುಬ್ರಾಯರು ಹೇಳಿದರು, ಅದಕ್ಕೋಸ್ಕರ ಬಂದೆ" ಅಂತ ಒಂದು ಪುರಾಣ ರಚಿಸಿದೆ. ಆಗ ಅವಳು ಬಾಗಿಲಿಂದ ಗೇಟು ಹತ್ತಿರಕ್ಕೇ ಬಂದಳು. "ಎಂತಹ ಇದ್ದಲು? ಮೂಟೆ ಹೇಗೆ? ಪುಡಿಗಿಡಿ ಸೇರಿದ್ದರೆ ವಾಪಸ್ ತೆಗೆದುಕೊಂಡು ಹೋಗಬೇಕು. ನೀವು ಆ ಮೂಲೆ ಅಂಗಡಿಯವರು ತಾನೆ. ಚೀಲ ಈಗಲೇ ವಾಪಸ್ ಕೊಡೋದಕ್ಕಾಗುವದಿಲ್ಲ, ಹೇಳಿಬಿಡ್ತೇನೆ. ಬೂದಿ ಕಲ್ಲು ಹೆಂಟೆ ಸೇರಿಸಿ ಲಾಭ ಹೊಡಿಯುವರನ್ನ ನಂಬೋದು ಕಷ್ಟ" ಅಂತ ಒಂದೇ ಸಮನೆ ಒದರಿದಳು. "ಸುಬ್ರಾಯರು ಬರಲಿ! ಆಮೇಲೆ ಬರುತ್ತೇನೆ" ಅಂತ ಮುಂದಕ್ಕೆ ಕಾಲಿಟ್ಟೆ. "ಸುಬ್ರಾಯರಲ್ಲ ಮನೆಯಲ್ಲಿ ಅಡಿಗೆ ಮಾಡೋದು! ಗೊತ್ತಾಯಿತೆ? ನಮ್ಮ ಕಷ್ಟ ಅವರಿಗೇನು ಗೊತ್ತು?" ಅಂದಳು ಆ ಪುಣ್ಯಾತಿಗಿತ್ತಿ. ಆಕೆಯ ಕಣ್ಣುಗಳ ಹೊಳಪೇ ಒಂದು ವಿಶೇಷ ರೀತಿಯದು.

ಮರುದಿನ ಅವರೆಲ್ಲ ನಮ್ಮ ಮನೆಗೆ ಬಂದಾಗ ನನಗೇಕೋ ಹೆದರಿಕೆ. ಆದರೂ, ಅವಳ ಕಣ್ಣುಗಳು ನನ್ನನ್ನು ಯಾವುದೋ ಒಂದು ಬಗೆಯ ದೈನ್ಯದಿಂದ ಪ್ರಶ್ನೆ ಮಾಡುವ ಹಾಗೆ ಕಾಣಿಸಿದುವು. ಆ ಕಣ್ಣುಗಳಿಗೆ ನಾನು ಸಂಪೂರ್ಣ ಮನಸೋತೆ.

—ಕು. ರಾ., ಟಿ. ನರಸೀಪುರ

ತುಂಬುರು ತಂತ್ರ

ದೇವಲೋಕದಲ್ಲೊಂದು ಸಭೆ. ದೇವೇಂದ್ರ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದ. ರಂಭೆ, ಊರ್ವಶಿ, ತಿಲೋತ್ತಮೆ ಮೂರು ಜನ ಕುಣಿತದವರೂ ಮೊದಲು "ಪಾಹಿಪದ್ಮಬಂಧುನೇತ್ರ" ಅಂತ ಪ್ರಾರ್ಥನೆ ಮಾಡಿದರು. ರಂಭೆಗೆ ಕೊಂಚ ನೆಗಡಿ ಹಿಡಿದಿದ್ದರಿಂದ ಯಾಕೋ ಪ್ರಾರ್ಥನೆ ಅಷ್ಟು ಕಳೆ ಕಟ್ಟಲಿಲ್ಲ! ಆಮೇಲೆ ಆ ದಿನದ ಸಭೆಯಲ್ಲಿ ವಿಪರೀತ ಬೊಬ್ಬೆ ಪ್ರಾರಂಭವಾಯಿತು. ದೇವತೆಗಳೆಲ್ಲರೂ ಮನುಷ್ಯರಮೇಲೆ ದೂರು ಹೇಳಿದರು. ವಿಧವಿಧವಾದ ದೂರುಗಳು!—"ಮಳೆ ಕೊಟ್ಟರೆ ಚಳಿಯಾಗುತ್ತೆ, ಅಂತಾರೆ." "ಬಿಸಿಲಾದರೆ ಎಳನೀರು ಕುಡಿಯುತ್ತಾರೆ." "ಆಳುಗಳ ಕೈಯಲ್ಲಿ ಪಂಕಾ ಎಳೆಸುತ್ತಾರೆ, ಪಾಪಿಗಳು!" "ಹೂವುಗಳಿಗೆ ಮುಖ ತೊಳೆದು ಅವುಗಳಿಗೆ ಕಂಪುಕೊಟ್ಟು ಶುಭ್ರವಾಗಿ ಗಾಳಿಯಲ್ಲಿ ತೇಲಿಸಿದರೆ, ಕಾಗದದ ಹೂವೇ ಚಂದ ಅಂತ ಅವುಗಳನ್ನು ಮಾಡುವ ಮೋಸದ ಮೇಷ್ಟರುಗಳನ್ನ ಹೆಣ್ಣುಮಕ್ಕಳ ಶಾಲೆಗಳಲ್ಲಿ ನಿಯಮಿಸುತ್ತಾರೆ, ಕಲೆಗೆ ಕಲ್ಲು ಹಾಕುವ ಕಾಡುಮನುಷ್ಯರು." "ಕತ್ತಲಾಗುತ್ತಲೂ ಬಾಂದಳವೆಲ್ಲ ಅಲೆದಾಡಿ ಪ್ರತಿಯೊಂದು ತಾರೆಗೂ ತೈಲ ತುಂಬಿ ಬತ್ತಿ ಹಾಕಿ ದೀಪ ಹೊತ್ತಿಸಿ ಸಾಲಾಗಿ ಡೊಂಕಾಗಿ ಗುಡಿಕಟ್ಟಿ ತೊಳಗಿಸಿ ಬೆಳಗಿಸಿದರೆ, ಹಾಳು ಜನ ಕತ್ತೆತ್ತಿ ನೋಡುವುದೇ ಇಲ್ಲ; ಬಾಗಿಲು ಹಾಕಿಕೊಂಡು ಕಾದಾಡುತ್ತವೆ; ಇಸ್ಪೀಟಾಡುತ್ತವೆ. ಮಕ್ಕಳನ್ನೂ ಕೂಡ ಎತ್ತಿ ತೋರಿಸುವುದಿಲ್ಲ." "ಗ್ರಹಚಾರ ಗ್ರಹಚಾರ ಅಂತ ಗ್ರಹಗಳನ್ನೇ ಬೈದಾಡುತ್ತವೆ." "ಮೂತಿಗೆ ಬಣ್ಣ ಬಳಿದುಕೊಂಡು ಅವರಿವರ ಮುಂದೆ ಓಡಾಡುವ ಹೆಂಗಸರನ್ನೆಲ್ಲ 'ತಾರೆ'ಯರು ಅಂತ ಕರೆದು ಚುಕ್ಕಿಗಳಿಗೆ ಅವಮಾನ ಮಾಡುತ್ತಾರೆ." "ಕಾಸು ಕೊಡು ಅಂತ ಕರುಳು ಕತ್ತರಿಸುವ ಕಟುಕನೊಬ್ಬನಿಗೆ ನಕ್ಷತ್ರಿಕ ಅಂತ ಹೆಸರಿಟ್ಟಿದಾರೆ" ಅಂತ ಹೀಗೆ ಬಸವಾಸುಬಾಲವಾಗಿ ದೂರುಗಳು ಒಂದರ ಹಿಂದೊಂದಾಗಿ ಹೊರಬಿದ್ದುವು. "ಕಾಮನಬಿಲ್ಲು ಬರಿಯ ಭ್ರಮೆಯಂತೆ; ಅದನ್ನು ಬಗ್ಗಿಸಿ ಬಾಣ ಹೂಡುವುದಕ್ಕಾಗುವುದಿಲ್ಲವಂತೆ; ಅದು ಸೊಟ್ಟಂತೆ; ದೂಷಿಸುತ್ತಾರೆ, ಹಾಳು ಜನ" ಎಂದರು ಕೆಲವು ದೇವತೆಗಳು.

ಕಡೆಗೆ ನಾರದರ ಪ್ರೇರಣೆಯ ಮೇಲೆ 'ತುಂಬುರು' ಎದ್ದು ನಿಂತರು. "ಸದ್ದು! ಸದ್ದು" ಎಂಬ ಗದ್ದಲವೆದ್ದಿತು. ಮನುಷ್ಯರಿಗೆ ಸರಿಯಾದ ಪಾಠ ಕಲಿಸಲು ನಾವೆಲ್ಲರೂ 'ಮುಷ್ಕರ' ಹೂಡುವುದೇ ಸರಿಯಾದ ಮಾರ್ಗ ಎಂದರು. ಯಾರಿಗೂ ಅರ್ಥವಾಗಲಿಲ್ಲ. ಬಿಟ್ಟ ಕಣ್ಣು ಬಿಟ್ಟಹಾಗೆ ಎಲ್ಲರೂ ತುಂಬುರುವನ್ನೇ ನೋಡಿದರು. ಆಗ ಅವರು "ಮುಷ್ಕರ ಅಂದರೆ ಮನುಷ್ಯ ಮಾಡುವ ಒಂದು ರೀತಿಯ ಚೇಷ್ಟೆ. ಅದನ್ನ ಅವರ ಮೇಲೆಯೇ ಪ್ರಯೋಗ ಮಾಡಿದರೆ ನಮಗೆ ಶ್ರೇಯಸ್ಕರ. ನಾವೆಲ್ಲರೂ ನಮ್ಮ ನಮ್ಮ ಕೆಲಸಗಳನ್ನು ಮಾಡದೆ ಉಳಿಸಿಕೊಂಡು ಸುಮ್ಮನೆ ಸುರಾಪಾನ ಮಾಡುತ್ತಾ ಕುಳಿತು ಬಿಡೋಣ" ಅಂದರು ನಾರದರು. ಇಂದ್ರನ ಒಪ್ಪಿಗೆ ಪಡೆದು ತುಂಬುರುವಿನ ನಾಯಕತ್ವದಲ್ಲೇ ಮುಷ್ಕರ ಪ್ರಾರಂಭವಾಯಿತು. ಹಲವಾರು 'ಸ್ಲೋಗ'ಗಳು ಸಿದ್ಧವಾದುವು.


"ದೇವದುಂದುಭಿ ಅಡಗಲಿ", "ಕಾಮನಬಿಲ್ಲು ಮುರಿದುಬೀಳಲಿ", "ಹಾವುರಾಣಿಗೆ ಹೂ ಮುಡಿದುಕೊಳ್ಳಲು ಜಡೆಯೇ ಇಲ್ಲ" ಇತ್ಯಾದಿ. "ಭಂಡಬಾಳುಗಾರರಿಗೆ ಪಂಡ ದಿಂದಲೇ ಪಿಂಡ" ಅಂತ ಹಲವರು ಕೂಗಿದರು.

ದೇವತೆಗಳಿಗೆ ಆಕ್ರೋಶ ಹುಟ್ಟಿತು. ನಾರದನಿಗೆ ಪರಮಾನಂದವಾಯಿತು. ಬಾಗಿಲ ಕಾಯುವ ಜಯವಿಜಯರೂ ಕೂಡ ತೆರೆದ ಬಾಗಿಲನ್ನು ತೆರೆದಿರಿಸಿ ಚೀಟಿಗಳ ಸ್ವಾಗತಿಸಲು ಹೊರಟರು.

ಸರಿ! ಹಕ್ಕಿಗಳು ಹಾಡಲಿಲ್ಲ. ಏಕೆಂದರೆ ಅವುಗಳ ಕಂಠದಲ್ಲಿ ಗಾನಸುಧಾರಸವನ್ನು ದೇವತೆಗಳು ದಿನದಿನವೂ ಇರಿಸುತ್ತಿದ್ದರು. ಈಗ ಅದು ನಿಂತುಹೋಯ್ತು. ಹೂವುಗಳು ಮೊಗ್ಗಿನಲ್ಲೇ ಸುರುಟಿಕೊಂಡು ಕರಿದಾಗಿ ಕೆಳಗೆ ಬಿದ್ದುವು. ಮೈದಾನದಲ್ಲಿ ಒಂದು ಚಿಟ್ಟೆ ಕೂಡ ಹಾರಾಡಲಿಲ್ಲ. ಮಳೆ ಹನಿಯಲಿಲ್ಲ. ಬೆಳೆ ಬೆಳೆಯಲಿಲ್ಲ. ಬೇಳೆ ಕಾಳು ಬೇಯಲಿಲ್ಲ. ತಾರೆಗಳಿಗೂ ಮಂಕು ಹಿಡಿಯಿತು. ಚಂದ್ರನ ಕಾಂತಿ ಕುಂದಿತು. ಮೋಡಗಳೆಲ್ಲ ಹರಿದು ಹಾದಿಗೊಂದು ಬೀದಿಗೊಂದು ಹಾರಾಡಿದುವು. ಅವು ಕುರುಬನಿಲ್ಲದ ಕುರಿಗಳಂತಾದುವು.

ಇಂದ್ರಸಭೆ ಮತ್ತೆ ನಡೆಯಿತು. ತುಂಬುರು ತಂತ್ರ ಫಲಿಸಿತೆ ಎಂಬ ವಿಷಯ ಚರ್ಚೆಗೆ ಬಂತು. ನಾಲ್ಕು ದಿನಗಳು ಕೂಡ ನಡೆಸಿದರೆ ಮಾನವನಿಗೆ ಬುದ್ಧಿ ಬರುತ್ತದೆ ಎಂದು ನಾರದರು ಹೇಳಿದರು. ಆದರೆ, ಒಬ್ಬ ದೇವತೆ ಮುಂದೆ ಬಂದು, "ಸ್ವಾಮಿ! ನಾವಿನ್ನು ಮುಷ್ಕರ ಮಾಡಲಾರೆವು. ಲೋಕದ ಮಕ್ಕಳ ಸಂಕಟವನ್ನು ನಾವು ಸಹಿಸಲಾರೆವು. ದೊಡ್ಡವರು ದಡ್ಡರು. ಅವರನ್ನು ಶಿಕ್ಷಿಸುವುದಕ್ಕೆ ಬದಲು ಈ ಮುಷ್ಕರದಿಂದ ಮಕ್ಕಳಿಗೆ ಬಹು ಕಷ್ಟವಾಗಿದೆ. ಅವುಗಳ ಮುಖದಲ್ಲಿ ಗೆಲುವೇ ಇಲ್ಲ" ಎಂದನು. ಎಲ್ಲರೂ ಹೌವೆಂದರು.

ಮುಷ್ಕರ ನಿಂತೇಹೋಯಿತು. ತುಂಬುರು ತಂಬೂರಿ ಹಿಡಿದರು. ಈಗಲೂ ಆತನಿಗೆ ಅದೊಂದು ಕೊರತೆ. "ಏನು! ಸ್ವಾಮಿ! ತಮ್ಮ ತಂತ್ರ ಫಲಿಸಲೇ ಇಲ್ಲವಲ್ಲ" ಅಂದರೆ ಆವರಿಗೆ ಬಹು ಕೋಪ.



ಗೌರೀ-ಗೌರೀಪತಿ

ಒಂದಾನೊಂದು ಕಾಲದಲ್ಲಿ ಗೌರೀಪತಿ ಎಂಬವನೊಬ್ಬನಿದ್ದ. ತಕ್ಕ ಪುಷ್ಟಿಗೆ ವಿದ್ಯಾಭ್ಯಾಸ ಮಾಡಿ, ಅದೆಲ್ಲವನ್ನೂ ಬೇಗ ಬೇಗ ಮರೆತು ಒಂದು ಬೀಡಿ ದುಕಾನನ್ನು ಆರಂಭ ಮಾಡಿ ಸಂಪತ್ತು ಹಣವನ್ನು ಗಳಿಸಿ ಇನ್ನೂ ಮೂವತ್ತು ವಯಸ್ಸಾಗುವುದರೊಳಗೇ ಐಶ್ವರ್ಯವಂತನಾಗಿ ಕಡೆಗೆ ಪೌರಸಭೆಗೆ ಸದಸ್ಯನೂ ಆಗಿಬಿಟ್ಟ. ಈ ಜೀವನೋಪಾಯದ ಗಲಾಟೆಯಲ್ಲಿ ಮದುವೆಯ ಯೋಚನೆಯನ್ನೇ ಮಾಡಲಿಲ್ಲ. ಅವನ ತಂದೆಯಾದರೂ ಎಷ್ಟೋ ಬುದ್ಧಿ ಹೇಳಿದರೂ ಕೇಳದೆ ತನಗೆ ಮೆಚ್ಚುಗೆಯಾದ ಹುಡುಗಿಯನ್ನೇ ತಾನು ಮದುವೆ ಮಾಡಿಕೊಳ್ಳುವುದಾಗಿ, ತನ್ನ ಜೀವನ ಪಥವು ಸಾಂಗವಾಗಿ ನಡೆವ ವೇಳೆಗೆ ಮದುವೆಯಾಗುವುದಾಗಿ ನಿಶ್ಚಯಿಸಿದ. ಹೀಗಾಗಿ ಬ್ರಹ್ಮಚಾರಿಯಾಗಿಯೇ ಅಲ್ಲಿನ ತನಕ ಉಳಿದುಕೊಂಡಿದ್ದ.

ಪೌರಸಭೆಗೆ ಸೇರುವ ಗದ್ದಲದಲ್ಲಿ ಅವನಿಗೆ ಗೌರಿಯ ಪರಿಚಯವಾಯಿತು. ಒಂದೇ ತರಗತಿಯಲ್ಲಿ ಮೂರು ಮೂರು ವರ್ಷ ಓದಿ ವಿದ್ಯಾಪಾರಂಗತೆಯಾದ ಗೌರಿಯು ಮಧ್ಯ ವಯಸ್ಸಿನ ಚಾಲೂಕು ಯುವತಿಯಾಗಿದ್ದಳು. ಓದಿ ಓದಿ ಸುತ್ತಿ ಸುತ್ತಿ ಸುಣ್ಣವಾಗಿ ಕಡೆಗೆ ಅತ್ತೆ ಮನೆ ದೊರಕಿದರೆ ಸಾಕು ಎನ್ನುವ ಸ್ಥಿತಿಗೆ ಬಂದಿದ್ದಳು. ಹಣವಂತ ಗುಣವಂತ ಗೌರೀಪತಿಯನ್ನು ನೋಡಿದಾಗಲೇ ಇವನನ್ನು ಕುತ್ತಿಗೆಗೆ ಕಟ್ಟುವಂತೆ ಮಾಡಲೇ ಬೇಕೆಂದು ಸ್ಥಿರ ಮಾಡಿದಳು. ಇಲ್ಲದ ನೆಪವನ್ನೆಲ್ಲಾ ಹೂಡಿ ಇವನ ಪರಿಚಯ ಮಾಡಿಕೊಂಡಳು. ಇದ್ದ ಶಾಲಾ ಶಿಕ್ಷಕಿ ಕೆಲಸಕ್ಕೂ ರಾಜೀನಾಮೆ ಕೊಟ್ಟು ಈತನ ಪೌರಸಭಾ ಸದಸ್ಯತ್ವಕ್ಕೆ ಸಹಾಯಕಳಾದಳು. ಚುನಾವಣೆಯಾದ ಮೇಲೆ ಕೃತಜ್ಞತೆಯಿಂದಲೋ ಬೇರೇನೂ ಮಾಡಲಾರದೆಯೋ ಏನೋ ಅಂತೂ ಗೌರೀಪತಿಯು ಗೌರಿಗೆ ತಾಳಿ ಕಟ್ಟಿಯೇ ಕಟ್ಟಿದ. ಚುನಾವಣಾ ಅಪಘಾತಗಳಲ್ಲಿ ಇನ್ನೂ ಮುಂದೆ ವಿವಾಹವು ಒಂದಾಗಬಹುದೆಂದು ನಿದರ್ಶನ ತೋರಿಸಿದ.

ಮದುವೆ ಆದ ಮೇಲೆ ಇವರಿಬ್ಬರೂ ನವೀನ ರೀತಿಯಲ್ಲಿ ಪ್ರತ್ಯೇಕವಾಗಿ ಸಂಸಾರ ಹೂಡಿದರು. ಹೂಡಿದ ಮೇಲೂ ಒಂದೆರಡು ವರ್ಷಗಳು ಸುಸೂತ್ರವಾಗಿಯೆ ಸಂಸಾರ ನಡೆಸಿದರು. ಆ ಮೇಲೆ ಒಂದು ದಿನ ಗೌರೀಪತಿಯು ಒಂದು ಮಾಸಪತ್ರಿಕೆಯನ್ನಿಟ್ಟುಕೊಂಡು ಪಾಮ್ ಆಲಿವ್ ಸಾಬೂನಿನ ಜಾಹೀರಾತೊಂದನ್ನು ನೋಡುತ್ತಿದ್ದ. ಗೌರಿಯು ಅವನ್ನು ನೋಡಿದಳು. ಗಂಡನನ್ನು ಕೇಳಿದಳು. ಇದೇನು ಆ ಹುಡುಗಿಯ ಚಿತ್ರವನ್ನೇ ಕಣ್ಣು ರೆಪ್ಪೆ ಹಾರಿಸದೆ ನೋಡುತ್ತಿದ್ದೀರಿ. ಅವಳೂ ನನ್ನ ಹಾಗೆಯೇ ಇದ್ದಾಳೆಯೇ? ಅವನಂದನು ಹಾಗೆ ಹೇಳಲಿಕ್ಕೆ ಆಗುವುದಿಲ್ಲ. ಈ ಜಾಹೀರಾತಿನ ಹುಡುಗಿಯು ಇನ್ನೂ ಚಿಕ್ಕವಳು. ಹಾಗಾದರೆ ನಾನೇನು ಮುದುಕಿಯೇ ಎಂದಳು. ಹಾಗೆ ನಾನನ್ನಲಿಲ್ಲ ಎಂದನು. ನೀವು ಹಾಗನ್ನಬೇಕೆ. ನೀವು ಹೇಳಿದುದನ್ನು ಅರ್ಥ ಮಾಡಿ

ಕೊಳ್ಳಲೂ ನನಗೆ ಬರುವುದಿಲ್ಲವೇ. ಎಷ್ಟೋ ಎಂತೆಂತಹ ಪುಸ್ತಕಗಳನ್ನೋ ಓದಿ ಹೊಡೆದ ನಾನು ಅಷ್ಟು ತಿಳಿಯಲಾರೆನೇ. ಆ ಜಾಹೀರಾತಿನ ಹುಡುಗಿಯನ್ನು ಮದುವೆ ಮಾಡಿಕೊಂಡಿದ್ದರೆ ಚೆನ್ನು ಎಂದು ನಿಮ್ಮ ಮನಸ್ಸು ಎಂದಳು. ಹುಚ್ಚು ಹುಚ್ಚಾಗಬೇಡ ಎಂದನು ಗೌರೀಪತಿ.

ಓಹೋ ನನಗೆ ಹುಚ್ಚು ಬೇರೆಯೋ ಎಂದು ಅಳಲಾರಂಭಿಸಿದಳು. ಅಯ್ಯೋ ಮಹರಾಯಿತಿ ನಾನು ಹೊರಗೆ ಹೊರಡುವಾಗ ನೀನು ಮಳೆಯಲ್ಲಿ ನೆನೆಯಬೇಡ ಅಂದರೆ, ನಾನು ನೆನೆದಿದ್ದೇನೆ ಎಂತಲೇ ಅರ್ಥ ಎಂದನು. ಅಲ್ಲ ಎಂದಳು. ಸರಿ ಮತ್ತೆ ಎಂದನು.

ಆವರೆ ಅನ್ನಲು ಆರಂಭಿಸಿದ ಯುವತಿಯ ನಾಲಿಗೆಯು ಕಾವೇರಿ ನದಿಯನ್ನೂ ಮೀರಿಸುತ್ತಿದೆ. ಅಲ್ಲಿ ಬಾಗಿ ಇಲ್ಲಿ ಸುಳಿದು, ಅಲ್ಲಿ ಸಾಗಿ ಇಲ್ಲಿ ಬಳುಕಿ ಇತ್ಯಾದಿಯಾದ ಕವನದ ನದಿಯೂ ಇದಕ್ಕೆ ಹೋಲಿಸಿದರೆ ಸ್ಥಿರವಾದುದೆಂದು ತೋರಿಸುತ್ತಿದೆ. ಹಾಗಾಗಿ ಕಡೆಗೆ ನೀವು ಮದುವೆಯಾದುದು ನಿಮ್ಮದೇ ತಪ್ಪು ಎಂದಳು. ಅದಕ್ಕೇ ನಿಮಗೆ ಮುದಿ ಜೀವನ ಎಂದು ಸೇರಿಸಿದಳು. ನಾನೇನೂ ಮುದಿ ಜೀವಿಯಲ್ಲ. ನನ್ನದು ಸುಖ ಜೀವನವೇ ಎಂದ.

ಹುಚ್ಚು ಮುದುಕರನ್ನು ಮದುವೆಯಾಗಿ ನೀವು ಸುಖ ಜೀವಿಗಳು ಎಂದು ಹೇಳಿಕೊಂಡರೆ ನೀವು ಹುಚ್ಚರೆ. ಅಲ್ಲದೆ ಹಗಲೂ ರಾತ್ರಿ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುತ್ತಿದ್ದರೆ, ಮುದಿಯಾಗುವುದರಲ್ಲಿ ಏನಾಶ್ಚರ್ಯ! ಅಲ್ಲದೆ ಆ ಜಾಹೀರಾತಿನ ಹುಡುಗಿಯನ್ನು ನೀವು ಮದುವೆಯಾಗಿದ್ದರೆ, ಅವಳು ನಿಮಗೆ ಚುನಾವಣೆಗೆ ಸಹಾಯಕಳಾಗಿದ್ದರೆ, ಇಷ್ಟು ಹೊತ್ತಿಗೆ ನಿಮಗೆ ಅಪಕೀರ್ತಿ ಬಂದೇ ಬರುತ್ತಿತ್ತು, ಎಂದು ಹೇಳಿಯೇ ಬಿಟ್ಟಳು.

ಕೆಲವು ಕಾಲ ಇದೇ ರೀತಿಯಾಗಿ ನಡೆಯಿತು. ಅವರಿಬ್ಬರಿಗೂ ಮಾತು ನಿಂತು ಹೋಯಿತು. ಆದರೂ ಕೂಗಾಟವು ನಿಲ್ಲಲಿಲ್ಲ. ಕೂಗಾಡಿದುದನ್ನು ಬರೆಯಲೂ ಆಗುವುದಿಲ್ಲ. ನೆರೆಯವರನ್ನು ಕೇಳಿದರೆ ನಿಮಗೇ ಗೊತ್ತಾಗುತ್ತದೆ.

ಸ್ವಲ್ಪ ಸ್ವಲ್ಪ ಶಾಂತಿಯುಂಟಾದ ಮೇಲೆ ಗೌರಿಯು ಹೇಳಿದಳು "ನಾನು ವ್ಯಾಯಾಮ ಶಾಲೆಗೆ ಹೋಗಿ ನನ್ನ ದೇಹ ದಾರ್ಢ್ಯವನ್ನು ಉತ್ತಮಗೊಳಿಸುತ್ತೇನೆ. ಈ ಸ್ಥೂಲ ಶರೀರವು ಹೋಗಿ ತೆಳ್ಳಗಾಗುವಂತೆ ಮಾಡುತ್ತೇನೆ. ಆವಾಗಲಾದರೂ ನೀವು ನನ್ನ ಮೊದಲಿನಂತೆಯೇ ಪ್ರೀತಿಸುತ್ತೀರಿ". ಗೌರೀಪತಿಯು ಅದೆಲ್ಲಾ ಹಾಗಿರಲಿ, ನೀನು ಮಾತನಾಡುವಾಗ ಏನು ಯೋಚನೆ ಮಾಡುತ್ತಿರುತ್ತೀ, ಅದು ತಿಳಿದರೆ ಸಾಕು ಎಂದನು.

ಸರಿ ಆರಂಭವಾಯಿತು. ಎರಡು ದಿನಕ್ಕೊಮ್ಮೆ ಉಪವಾಸ, ಮೂರು ರಾತ್ರಿಗೊಮ್ಮೆ ಫಲಹಾರ, ತುಪ್ಪ ಮುಟ್ಟಲ್ಲ. ಸಿಹಿ ತಿಂಡಿ ವರ್ಜ್ಯ ಬೆಳಗಿನ ಧ್ಯಾನದ ಆಸನಗಳು, ಸಾಯಂಕಾಲ ವ್ಯಾಯಾಮ. ಹೀಗೆ ಮೂರು ನಾಲ್ಕು ವಾರಗಳಾದ ಮೇಲೆ ಒಂದು ದಿನ ಗಂಡನಿಗೆ ಹೇಳಿದಳು. ನನ್ನ ಸೊಂಟ ಎಷ್ಟು ಸಣ್ಣದಾಗಿದೆ ನೋಡಿ ಎಂದು. ಸೊಂಟ ಸೊರಗಿ ಹೋಗಿರು

ವುದು ಹಾಗಿರಲಿ, ಕಾಲೇಕೆ ಕುಂಟುತ್ತಾ ನಡೆಯುತ್ತೀ, ಕಾಲಿನಲ್ಲಿ ಬಲವೇ ಇಲ್ಲ ವಲ್ಲ ಎಂದ ಗೌರೀಪತಿ. ಅದು ಯಾಕೋ ಏನಾಗಿದೆ ಕಾಲಿಗೆ ಎಂದಳು. ಸುಟ್ಟ ಪಶು ವಲ ಕಾಯಿಸ ಹಾಗಿದೆ ಎಂದ.

ಗೌರಿಯು ಅಳುವುದಕ್ಕೆ ಆರಂಭಮಾಡಿ ದಳು. ಇನ್ನು ಮೇಲೆ ನಿಮ್ಮನೆಯಲ್ಲಿರು ವುದಿಲ್ಲ ಎಂದು ಗಂಟು ಮೂಟೆ ಕಟ್ಟಿ ಕೊಂಡು ತವರು ಮನೆಗೆ ಹೊರಟು ಹೋದಳು. ಅಲ್ಲಿ ಅವರ ತಾಯಿಯು ಅವರ ತವರು ಮನೆಗೆ ಹೊರಟು ಹೋಗಿ ದ್ದಳಾದ್ದರಿಂದ, ತಿರುಗಿ ಮನೆಗೆ ಬಂದಳು. ಗೌರೀಪತಿಯ ತಪ್ಪುನೆಪ್ಪುಗಳನ್ನೆಲ್ಲಾ ಮನ್ನಿಸುವುದಾಗಿ ಹೇಳಿದಳು. ಈಗಿನ ಕಾಲದ ಹೆಂಗಸರ ಚಾಲೂಕು ಇದೊಂದು. ಮಾಡದೆ ಇದ್ದ ತಪ್ಪನ್ನು ಮನ್ನಿಸುವುದು, ಹಾಗೆಂದ ಕೂಡಲೇ ಗಂಡನು ರೇಗಿಯೇ ರೇಗುವನು. ಬೈದೇ ಬೈಯುವನು. ಹಾಗೆ ರೇಗಿದ ನಂತರ, ಅಂದನಂತರ ಮನ್ನಿಸಲು ಸಾಕಷ್ಟು ಸಾಮಗ್ರಿ ದೊರತೇ ದೊರೆಯು ತ್ತದೆ. ಆದರೆ ಗೌರೀಪತಿಯು ಶಾಂತಿ ಪ್ರಿಯ, ಬಲಹರಪ್ರಿಯನಲ್ಲ. ಹಾಗಾಗಿ ಸುಮ್ಮನಿದ್ದರೆ ಸವತಿಯೂ ಸುಸ್ತು ಎಂಬಂತೆ, ಮಾತಿಗೆ ಮಾತು ಮುಗಿಯಿತು.

ಇದಾದ ಕೆಲವು ದಿನಗಳಲ್ಲಿ ಗೌರೀ ಪತಿಯು ದಿನಾಲೂ ಸಾಯಂಕಾಲ ಪುರುಷ ಸಮಾಜಕ್ಕೆ ಹೋಗಲು ಉಪಕ್ರಮಿಸಿದ. ಹೀಗೆ ಮಾಡುವುದರಿಂದ ತನ್ನ ವ್ಯಾಪಾರಕ್ಕೆ ಒಳ್ಳೆಯದೆಂಬ ನೆಪವನ್ನು ಹೂಡಿದ. ವಿವಾಹಜೀವನವು ಕಹಿಯಾದಾಗ ಮಾತ್ರ ಪುರುಷ ಸಮಾಜಕ್ಕೆ ಹೋಗುತ್ತಾರೆಂಬ ಅಪವಾದಕ್ಕೆ ಗುರಿಯಾಗುವುದನ್ನೂ ಲೆಕ್ಕಿ ಸದೆ ಹೋಗಲು ಶುರು ಮಾಡಿಯೇ ಬಿಟ್ಟ. ಗೌರಿಯು ಬೇಜಾರಾಗಿ ರೇಗುವುದನ್ನೂ ಮರೆತಳು. ಒಂದು ದಿನ ಗೌರಿಯು ಮುಖ ಪುಡಿಯ ಡಬ್ಬವೊಂದನ್ನು ತರಲಾಗಿ ಹಂಡಿನ ಅಂಗಡಿಗೆ ಹೋದಳು. ಅಲ್ಲಿ ಸ್ಫುರದ್ರೂಪಿಯಾದ ಅಂಗಡಿಯ ನೌಕರ ನೊಬ್ಬನು ಈಕೆಯನ್ನು ಕಂಡ ಕೂಡಲೆ, ನೀರಿನಿಂದ ಹೊರಬಿದ್ದ ಮೀನಿನಂತೆ ಕಣ್ಣು ಕಣ್ಣು ಬಿಡಲಾರಂಭಿಸಿದನು. ಯಾಕೆ ಸ್ವಸ್ಥವಿಲ್ಲವೇ ಎಂದು ಕೇಳಿದಳು. ಇಲ್ಲಮ್ಮಾ, ನಿಮ್ಮ ರೂಪನ್ನು ನೋಡಿದ ಮೇಲೆ ಮನಸ್ಸೆಲ್ಲಾ ಕಳವಳವಾಗಿದೆ. ನಿಮ್ಮಂತಹ ಹುಡುಗಿಯನ್ನು ಮದುವೆ ಯಾಗಿದ್ದರೆ, ಆ ಸ್ಫೂರ್ತಿಯಿಂದಲೇ ಈ ಅಂಗಡಿಯನ್ನು ಕೊಂಡು ಕೊಂಡು ಬಿಡು ತ್ತಿದ್ದೆ ಎಂದು ಗಳಗಳಿಸಿದ. ನಾನು ಮದುವೆಯಾದವಳು. ನಿಮ್ಮನ್ನು ನೋಡಿ ದರೆ ನಿಮಗೂ ಆದಾಗಿದೆಯೆಂದು ಹೇಳ ಬಹುದು. ನಾವಿಬ್ಬರೂ ಈ ರೀತಿಯಾಗಿ ಮಾತನಾಡಬಾರದು. ಮರೆತು ಬಿಡಿ ಎಂದು ಹೇಳಿ ಅವಸರದಲ್ಲಿ ಮುಖ ಪುಡಿ ಯನ್ನು ಮರೆತು ಮನಸ್ಸಿನಲ್ಲೇ ಹಿಗ್ಗುತ್ತಾ ಹಿಂತಿರುಗಿ ಬಂದಳು.

ಮೂರನೆಯ ದಿನ ಜಡೆ ಹಾಕಿಕೊಳ್ಳು ವಾಗಲೂ, ಬೈತಲೆ ತೆಗೆಯುವಾಗಲೂ, ಊಟ ಮಾಡುವಾಗಲೂ ಸಣ್ಣ ದನಿಯಲ್ಲಿ ಸಂಗೀತಕ್ಕೆ ಆರಂಭಿಸಿದಳು. ಬಾಂಡಲೆ ಯಲ್ಲಿ ಬಿದ್ದ ಸಂಡಿಗೆಯಂತೆ ಮಿಡಿಯುತ್ತಿದ್ದ ತನ್ನಾಕೆ ಹೀಗೆ ಬಾದಾಮಿ ಹಲ್ವದಂತೆ ಮೆತ್ತನಾದುದನ್ನು ಕಂಡು ಗೌರೀಪತಿಯು ಸ್ವಲ್ಪ ಅವಾಕ್ಕಾದನು. ಅವನ ಮನಸ್ಸೂ

ಸ್ವಲ್ಪ ಕದಡಿತು. ಒಂದು ದಿನ ಆಕೆಯು ಮುಖ ಪುಡಿಯ ಜಾಹೀರಾತೊಂದನ್ನು ಒಂದು ಮಾಸ ಪತ್ರಿಕೆಯಲ್ಲಿ ನೋಡುತ್ತಿದ್ದಾಗ, ಇವನು ಇಣಿಕಿ ನೋಡಿದ. ಜಾಹೀರಾತಿನಲ್ಲಿ ಸ್ಫುರದ್ರೂಪಿಯ ಚಿತ್ರ. ಇದೇನು ಇವನ ಮೇಲೆ ಕಣ್ಣು ಎಂದನು. ಎಲ್ಲೋ ನೋಡಿದ ಹಾಗೆ ಇದೆ ಈತನನ್ನು, ಅದಕ್ಕಾಗಿ ಜ್ಞಾಪಿಸಿಕೊಳ್ಳುತ್ತಿದ್ದೆ ಎಂದಳು. ಜ್ಞಾಪಿಸಿಕೊಂಡರೆ ಪರವಾಗಿಲ್ಲ. ತಿರುಗಿ ತಿರುಗಿ ನೋಡ ಹೋದರೆ ಚೆನ್ನಲ್ಲ ಎಂದನು. ಬಿಡಿ ಅಂದರೆ ಈ ವಯಸ್ಸಿನಲ್ಲೆ. ಅದಿರಲಿ, ಊಟಕ್ಕೆ ಏನು ಅಡಿಗೆ ಮಾಡಿಸಲಿ ಎಂದಳು. ಗೌರೀಪತಿಗೆ ಅಸೂಯೆ ಉಂಟಾಯಿತು ಎಂಬ ಯೋಚನೆಯೇ ಅವಳಿಗೆ ಹುಮ್ಮಸ್ಸನ್ನು ಕೊಟ್ಟಿತು. ಅಸೂಯೆ ಬರಬೇಕಾದರೆ ನನ್ನ ಮೇಲೆ ಪ್ರೀತಿ ಇದ್ದೇ ಇರಬೇಕು ಎಂದು ದೃಢಪಡಿಸಿಕೊಂಡಳು.

ಈ ರೀತಿ ಕೆಂಪೇರಿದ ತನ್ನ ಪತ್ನಿಯ ಮುಖವನ್ನು ನೋಡಿದಾಗ ದಿಟವಾಗಿಯೂ ಗೌರೀಪತಿಗೆ ಭಯವಾಯಿತು. ಅಲ್ಲಾ, ಮುಖ ಪುಡಿ ಅಂಗಡಿಯವನಿಗೆ ತನ್ನ ಹೆಂಡತಿ ಬಂದಾಗ ಒಂದೆರಡು ಉತ್ತೇಜಕ ಮಾತುಗಳನ್ನು ಹೇಳು ಎಂದು ಹೇಳಿ ಬಂದಿದ್ದನಾದರೂ ಎರಡೇ ಎರಡು ಮಾತುಗಳಿಗೆ ಇಷ್ಟು ಉಬ್ಬಿದ ಹೆಂಡತಿಯು ಇನ್ನು ಮುಂದೆ ಏನಾದರೂ ಮಾಡಿದರೋ ಎಂಬ ಭೀತಿಯು ತಲೆದೋರಿತು. ಇನ್ನು ಮುಂದೆ ಈ ರೀತಿ ಉತ್ತೇಜನ ಕೊಡಿಸಬೇ ಬಾರದು ಎಂದು ತೀರ್ಮಾನಿಸಿಕೊಂಡನು.

ಏಕೆ ಅನ್ನುತ್ತೀರೋ? ಗೌರೀಪತಿಗೆ ತಿಳಿಯದು, ಪ್ರಾಚೀನ ಪ್ರೀತಿಶಾಸ್ತ್ರ. ನವಯುವತಿಯರಿಗೆ ದೇವರು ಕೊಟ್ಟ ರೂಪಿಗಿಂತ, ಹರೆಯದ ಹುಡುಗರು ಕೊಟ್ಟ ನೋಟಗಳು ಬಹಳ ಪ್ರಿಯ.

ತುರ್ಕಿ ನಿಯೋಗ ಗೋಷ್ಠಿಯವರು ಬೆಂಗಳೂರಿಗೆ ಬಂದಿದ್ದಾಗ ಅವರನ್ನು ನೋಡಿದವರೊಬ್ಬರು, ಇವೇನು ಇಂಗ್ಲೀಷಿನವರನ್ನೇ ಪ್ರತಿನಿಧಿಗಳನ್ನಾಗಿ ಕಳಿಸಿದ್ದಾರೆಯೇ ಎಂದು ಶಂಕಿಸಿದರಂತೆ.

* * * *

ಕೆಲವು ದಿನಗಳ ಹಿಂದೆ ನಡೆದ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಹುಡುಗನೊಬ್ಬನನ್ನು ಕೇಳಿದರಂತೆ – ನಿನಗೆ ಜಯ ಲಭಿಸದೇ ಇದ್ದರೆ ಏನು ಮಾಡುತ್ತೀ ಎಂದು.

—ಅವನಂದನಂತೆ ಗಡಿಪ್ರಾಂತ್ಯದ ಸುಂಕದ ಕಟ್ಟೆಯಲ್ಲಿ ಕೆಲಸಕ್ಕೆ ಸೇರಿಕೊಳ್ಳುತ್ತೇನೆ, ಆಗ ಸಂಪಾದನೆಯೇನೂ ಕಡಿಮೆ ಇರುವುದಿಲ್ಲ – ಜಯಶಾಲಿಯಾದವನಿಗಿಂತ.

* * * *

ಸ್ವದೇಶಿ ಪ್ರಚಾರವು ಸಾಂಗವಾಗಿ ನೆರವೇರುತ್ತಿದೆಯಂತೆ.

—ಅಹುದು, ನಾಗರೀಕ ಕುಡುಕರೂ ಸ್ವದೇಶಿ ಆಚರಿಸುತ್ತಾರಂತೆ.

* * * *

ನನ್ನ ತಾಪತ್ರಯ

ಓದುಗರ ಹಾಳೆಯಲ್ಲಿ ಇತ್ತೀಚೀಚೆಗೆ ಕಾಗದಗಳೇ ಪ್ರಕಟವಾಗುತ್ತಿರಲಿಲ್ಲ ವಾಗಿ, ನಾನೇ ಒಂದು ಕಾಗದ ಬರೆದು ಒಂದು ಸಮಸ್ಯೆಯನ್ನು ಓದುಗರ ಮುಂದೆ ಇಡೋಣ ಎಂದುಕೊಂಡೆ. ಇಡೀ ಕರ್ನಾಟಕದಲ್ಲಿ ಸುಪ್ರಸಿದ್ಧವಾದ ದ್ವಿದಿನ ಪತ್ರಿಕೆಯ ಓದುಗಾರರ ಹಾಳೆಯ ಸಹಸಂಪಾದಕ ನಾನೆಂದು ಬೇರೆ ಹೇಳಬೇಕಾಗಿಲ್ಲ.

ಪ್ರಿಯ ಸಂಪಾದಕರಲ್ಲಿ,

ಲೇಖಕನ ಬಿನ್ನಹ. ಇತ್ತೀಚೀಚೆಗೆ ನಮ್ಮ ದೇಶದ ಹೆಂಗಸರು ಸಮಾಜಗಳಿಗೆ ಹೋಗುವಾಗಲೂ ಮುಖದ ತುಂಬ ಅರಿಶಿನ ಹಚ್ಚಿಕೊಂಡು ಹೋಗುತ್ತಾರೆ. ಸಭೆಯಲ್ಲಿ ಭಾಷಣವಾಗುವಾಗ ಗಲ್ಲದ ಮೇಲೆ ಕೈಯಿಟ್ಟುಕೊಂಡು ತೂಕಡಿಸಲೇ ಬೇಕಾಗುತ್ತದೆ. ಅದೇ ಕೈನಲ್ಲೇ ಕಾಗದಪತ್ರಗಳನ್ನೂ ಮುಟ್ಟುತ್ತಾರೆ. ಹೀಗಾಗಿ ಕಾಗದಗಳೂ ಸೀರೆ ಸೆರಗುಗಳೂ ಬಣ್ಣಬಣ್ಣವಾಗಿ ಕೆಟ್ಟುಹೋಗುತ್ತದೆ. ಇದನ್ನು ನಿವಾರಿಸಲು ನಿಮ್ಮ ಓದುಗರಲ್ಲಿ ಯಾರಾದರೂ ಒಂದು ಉಪಾಯವನ್ನು ಸೂಚಿಸಿದರೆ ಸಮಾಜಸೇವೆ ಮಾಡಿದಂತಾಗುತ್ತದೆ. ಈ ಪತ್ರವನ್ನು ನಿಮ್ಮ ಅಮೋಘವಾದ ಪತ್ರಿಕೆಯಲ್ಲಿ ಪ್ರಕಟಿಸುವ ಸಹಾಯವನ್ನು ಕೋರುವ, ನಿಮ್ಮ,

ಶಾಂ. ತಿ.

ಇದೇ ನಾನು ಬರೆದ ಪತ್ರ. ಇದಕ್ಕೆ ಜವಾಬಾಗಿ ನಾನು ಯೋಚಿಸಿದಂತೆ ಹತ್ತಾರು ಪತ್ರಗಳು ಬಂದುವು, ನೂರಾರು ಪತ್ರಗಳೂ ಬಂದುವು. ಎರಡು ಪುಟ ಎಂದು ನಿಯಮಿಸಿದ್ದುದ್ದು ನಾಲ್ಕು ಪುಟಕ್ಕೂ ಮೀರಹತ್ತಿತು. ಈಗ ನಾನು ತಾಪತ್ರಯಕ್ಕೆ ಸಿಕ್ಕಿಕೊಂಡಿದ್ದೇನೆ. ನನ್ನ ಜೀವನವೇ ಅಪಾಯಕ್ಕೀಡಾಗಿದೆ. ನೋಡಿ ನನಗೆ ಬಂದ ಪತ್ರಗಳು. ಅವುಗಳನ್ನು ನೀವು ಓದಿದರೆ ನನ್ನ ಕಷ್ಟ ನಿಮಗೂ ಗೊತ್ತಾಗುತ್ತೆ.

ಪ್ರಿಯ ಸಂಪಾದಕರಿಗೆ,

ವಿಜ್ಞಾಪನೆಗಳು. ಶಾಂ. ತಿ. ಎಂಬ ಅಂಕಿತನಾಮದಡಿಯಲ್ಲಿ ಬರೆದ ಪತ್ರವನ್ನು ಆಮೂಲಾಗ್ರವಾಗಿ ಓದಿದೆನು. ಶಾಂ. ತಿ.ಯವರು ಶುದ್ಧ ಹಳ್ಳಿಯ ಹೆಂಗಸಾಗಿರಬೇಕು. ನಾವುಗಳೆಲ್ಲರೂ ಈಗೀಗ ಅರಿಶಿನವನ್ನೇ ಉಪಯೋಗಿಸುವುದಿಲ್ಲ. ಅವರಂತೆ ಕಾಣುವ ಹಾಗೆ, ಫ್ರೆಂಚರ ಕೋಟಿ ಕಂಪೆನಿಯ ಅರ್ಶನೊ ಎಂಬ ರಂಗನ್ನೇ ಕೆನ್ನೆಗೆ ತಿಳಿಯಾಗಿ ಬಳಿದುಕೊಳ್ಳುತ್ತೇವೆ. ಇದು ಕೈಗೂ ಅಂಟುವುದಿಲ್ಲ. ಅಂದ ಮೇಲೆ ಕಣ್ಣಿಗೆ ಇಂಪಾದರೂ, ಬಾಯಿ ರುಚಿ ಕೆಡಿಸಿದೆ, ಶುಭ್ರತೆಗೆ ಸಹಾಯಕವಾಗಿದೆ. ಸಂಪ್ರದಾಯಕ್ಕೆ ಸಂಪ್ರದಾಯ, ನಾಗರಿಕತೆಗೆ ನಾಗರಿಕತೆ. ಈಗ ಎಲ್ಲಾ ಸಮಾಜ

ಗಳೆಲ್ಲೂ ಇದು ಮಾರಾಟಕ್ಕಿದೆ. ಅರಿಶಿನ ಕುಂಕುಮಕ್ಕೆ ಕರೆದಾಗಲೂ ಇದನ್ನೇ ಸುಮಂಗಲಿಯರಿಗೆ ಕೊಡುತ್ತೇನೆ.

ಇವನ್ನು ನಿಮ್ಮ ಮತ್ತು ಶಾಂ. ತಿ.ಯವರ ಅವಗಾಹನೆಗಾಗಿ ಬರೆದಿದ್ದೇನೆ. ತಿಳಿಯುವುದು.

ಯಬ್ಲೋನಿಲ್ಲ, ನಿಮ್ಮ ವಿಶ್ವಾಸಿ,
ಕಲ್ಯಾಣಪುರಿ. ರಂಕು ಸುಬ್ಬಮ್ಮ.

ಎರಡನೆಯ ಕಾಗದವು ಸ್ವಲ್ಪ ಬಿರುಸಾಗಿಯೇ ಇತ್ತು.

ಪ್ರಿಯ ಸಂಪಾದಕರಿಗೆ,

ಓದುಗರ ಶಾಖೆಯಲ್ಲಿ ಶಾಂ. ತಿ.ಯ ಅಂಕಿತದಲ್ಲಿ ಬರೆದ ಲೇಖನವು ನಮ್ಮ ಮಹಿಳೆಯರಿಗೆ ಅವಮಾನ ಮಾಡಿದಂತೆಯೇ ಸರಿ. ಕೆನ್ನೆಗೆ ಬಣ್ಣ ಹಚ್ಚುವುದು, ಅದು ಕೈ ಕಾಗದಗಳಿಗೆ ಕಳಂಕ ತರುವಂತೆ ಹಚ್ಚುವುದು, ಇವೆಲ್ಲವೂ ಹಳ್ಳಿಯ ಹೆಂಗಸರಿಗೂ ಕೂಡ ಸಾಧ್ಯವಿಲ್ಲ. ನಮ್ಮ ಸಂಘದ ಕಾರ್ಯಾಚರಣೆಯ ಫಲವಾಗಿ ಹಳ್ಳಿ ಹಳ್ಳಿಯಲ್ಲಿನ ಸೋದರಿಯರೆಲ್ಲರೂ ಕೂಡ ಈಗ ನಾಜೂಕಾಗಿ ಶೃಂಗಾರ ಮಾಡಿಕೊಳ್ಳುವುದನ್ನು ಕಲಿತಿದ್ದಾರೆ. ಅಂದ ಮೇಲೆ ಕುಹಕಕ್ಕಾಗಿಯೇ ಈ ಕಾಗದ ಪ್ರಕಟಣೆಯಾಗಿದೆಯೋ ಎಂದು ಅನುಮಾನ ಉಂಟಾಗುತ್ತದೆ. ಹೀಗಿರುವಾಗ ನೀವು ಅದನ್ನು ಪ್ರಕಟಿಸಿದುದು ನಿಮ್ಮ ತಪ್ಪು. ಈ ತಪ್ಪಿನ ಒಪ್ಪಿಗೆಯನ್ನು ಮುಂದಿನ ಸಂಚಿಕೆಯಲ್ಲೇ ಪ್ರಚುರಪಡಿಸಿ. ಇಲ್ಲವಾದರೆ ಮಾನನಷ್ಟ ಮೊಕದ್ದಮೆಗೆ ಸಿದ್ಧರಾಗಿರಿ.

ಜಗಳೂರು, ನಿಮ್ಮ,
ಅಸಂಪ ಸಂಸ್ಥಾನ. ಸು. ಕು. ಮಾರಿದೇವಿ.

ಮೂರನೆಯ ಕಾಗದವು ವಿಚಿತ್ರ ರೀತಿಯದು.

ಸಂಪಾದಕರಲ್ಲಿ ಸಲಾಮುಗಳು,

ನಿಮ್ಮ ದೂಕೆ ಪತ್ರಿಕೆಯಲ್ಲಿದ್ದ ಕಾಗಜವನ್ನು ಓದಿದೆವಿ. ಅವರೊಳಗೆ ನಮ್ಮ ದೂಕೆ ಹೆಂಗಸರು ಅರ್ಶಿನ ಹಚ್ಚಿಕೊಂಡು ಕೈಯೆಲ್ಲಾ ಕೊಳೆ ಮಾಡ್ತಾರೆ ಎಂದು ಹೇಳಿದ್ದೀರಿ. ನಮ್ಮೂರ್ರೊಳ್ಗೆ ಹೇಳ್ತಾರೆ. ಹೆಂಗಸರು ಅರಿಶಿನ ಬಳಿದುಕೊಂಡರೆ ಗಡ್ಡ ಮೀಸೆ ಹುಟ್ಟೋಕಿಲ್ಲ ಎಂತ. ಅದಕ್ಕೋಸ್ಕರ ನಾನೂ ಬಳಿದಿ ಬಳಿದಿ ಮೂರು ತಿಂಗಳೂ ಬಳಿದೆ. ಆಮ್ಯೇಲೆ ಚಿಕ್ಕಪುಟ್ಟ ಹುಡುಗರೂ ಕೂಡ "ಏನವ್ವಾ, ನಿನ್ನ ಮೀಶೆ ಇಷ್ಟು ತಿಳಿಯಾಗಿ ಇಷ್ಟು ಹೊರವಾಗಿ ಬೆಳೆಯಲು ಏನೆಣ್ಣೆ ಹಾಕ್ತೀಯಾ, ನಾವು ಗಂಡಸರು ನಮಗೇ ಇಷ್ಟು ಚೆಂದಾಗಿ ಬೆಳಿಯೋಕಿಲ್ಲ. ಆ ಎಣ್ಣೆ ನಾವೂ ಹಾಕ್ತೀವಿ" ಎಂದು ಕೇಳಲು ಶುರು ಮಾಡ್ತಾರೆ.

ನನ್ನ ತಾಪತ್ರಯ

ಅರ್ಶನದಿಂದ ಏನೂ ಪ್ರಯೋಜನ ಇಲ್ಲಾ. ಹೆಂಗಸರೆಲ್ಲಾ ಬುಟ್ಟುಬುಟ್ಟಿದ್ದಾರೆ.

ಫಾಲ್‌ಮನ್ಸಿಲ್,
ಪನ್ನಪೇಟೆ

ಇಂತಿ ನಿಮ್ಮ,
ಮೋಮುಉನ್ನೀಸಾ ಬಿ.

ಇದನ್ನೂ ಹೇಗಾದರೂ ತಡೆದುಕೊಂಡೆ. ಕಡೆಯ ಕಾಗದ ನೋಡಿ ಬಿಟ ವಾಗಿಯೂ ಗಾಬರಿಯಾಗಿದೆ. ಅದಕ್ಕೇ ಈಗ ನಾನು ಅಲಿಘರ್ ಬೀಗನ್ನು ಯನ್ನು ಕೊಂಡು ನನ್ನ ಕೊರಳಿಗೆ ಹಾಕಿಸಿದ್ದೇನೆ. ಮೈಗಾವಲಿಲ್ಲದೆ ಹೊರಗೆ ಹೊರಡಲು ಹೆದರಿದ್ದೇನೆ. ಜೀವಕ್ಕೆ ದೇಹಕ್ಕೆ ಇನ್ನೊಂದು ವರ್ಷ ಅಪಾಯವಾಗದಿದ್ದರೆ, ತಿರುಪತಿ ದೇವರೆದುರಿಗೆ ತಲೆ ಬೋಳಿಸಿಕೊಳ್ಳುತ್ತೇನೆಂದು ಹರಕೆ ಹೊತ್ತಿದ್ದೇನೆ.

ಕಾಗದವೇನೂ ದೊಡ್ಡದಲ್ಲ. ಆದರೆ ತುರುಕು ಮೆಣಸಿನಕಾಯಿ.

ಸಂಪಾದಕರೇ.

ನಿಮ್ಮ ಶಾಂ. ತಿ.ಯ ವಿಳಾಸವನ್ನು ಈ ಕೂಡಲೆ ಕೊಡಿರಿ. ಇಲ್ಲದಿದ್ದರೆ ಹುಷಾರ್.

ವ್ಯಾಯಾಮ ಶಿಬಿರ,
ಅಮೀಜಾನಗರ.

ಟಾರಾಬಾಯಿ.

ನಿಜ! ಸ್ವಾಮಿ

ನೂರಕ್ಕೆ ನೂರರಷ್ಟು ವರ್ಜನೀಯ
ಹೊಗೆ ಸೊಪ್ಪಿನಿಂದ
ತಯಾರಿಸಿದ ಸಿಗರೇಟು

ಚರ್ಚಿಲ್‌ರವರು ಆಫ್ರಿಕಾಗೆ ಹೋಗಿದ್ದುದರ ಜ್ಞಾಪಕಾರ್ಥವಾಗಿ ಅವರಿಗೆ ಯಾರೋ ಒಂದು ಸಿಂಹವನ್ನು ದಾನ ಮಾಡಿದಾರಂತೆ. ಆ ಸಿಂಹವನ್ನು ಜೂ ಗಾರ್ಡನ್ನಿನಲ್ಲಿ ಹೋಗಿ ನೋಡಿದ್ದುದರ ಸ್ಮಾರಕವಾಗಿ ಚರ್ಚಿಲ್‌ರವರನ್ನು ಸಿಂಹಕ್ಕೆ ದಾನ ಮಾಡುತ್ತಾರೋ ಏನೋ?

ಮುದ್ರಾ-ಭಾಸ

"ಇಂದಿನ ಕಾಗದದ ಅಭಾವದ ದೆಸೆಯಿಂದ ಉಂಟಾಗಿರುವ ಕಷ್ಟ ಪರಿಸ್ಥಿತಿಯನ್ನು ವಿಮರ್ಶಿಸಲಾಯಿತು. ಸರ್ಕಾರಕ್ಕೆ ಹಲವು ಸಲಭೆಗಳನ್ನು ಮಾಡಲಾಯಿತು."

—(ವೇ. ಬಂ. ೧೫-೨-'೪೩)

ಕಾಗದದ ಅಭಾವದಿಂದ "ಸುಲಭವಾದ ಸಲಹೆ" ಎಂಬುವಕ್ಕೆ ಬದಲಾಗಿ "ಸಲಭೆ" ಎಂದು ಅಚ್ಚು ಹಾಕಿರುವುದು ಅನುಕರಣೀಯವಾಗಿದೆ.

ಅಂದು—ಇಂದು

ಸಾವಿರದ ಒಂಭೈನೂರ ನಲುವತ್ತ ಮೂರು ವರ್ಷಗಳ ಹಿಂದೆ ಮಧ್ಯಪ್ರಾಚ್ಯವಲ್ಲಿ ಒಬ್ಬ ಸತ್ಪುರುಷನಿದ್ದನಂತೆ. ಒಂದು ಕೆನ್ನೆಗೆ ಪೆಟ್ಟು ಕೊಟ್ಟರೆ, ಆತನು ನಗು ನಗುತ ಇನ್ನೊಂದು ಕೆನ್ನೆಯನ್ನು ತೋರುತ್ತಿದ್ದನಂತೆ. ಕೋಪವನ್ನು ಕಾಣನಂತೆ. ತಾಪವನ್ನು ಅರಿಯನಂತೆ. ಕಂಡವರ ದುಃಖವನ್ನು ಕಂಡು ಮರುಗುವನಂತೆ. ಪರರ ದುಃಖವನ್ನಿಳಿಸಲೋಸುಗ ತಾನೂ ಕಠಿಣ ವ್ರತಗಳನ್ನಾಚರಿಸುತ್ತಿದ್ದನಂತೆ. ಅವರ ದುಃಖವಲ್ಲಿ, ಬಡತನದಲ್ಲಿ, ಭಾಗಿಯಾಗಿ ಅವರ ಸೇವೆಗೆ ಟೊಂಕಕಟ್ಟಿ ನಿಂತನಂತೆ.

ಅವನ ಸ್ನೇಹಿತರು ಎಂದೆಣಿಸಿಕೊಂಡ ಕೆಲವರು ಅಸೂಯೆಯಿಂದ, ಆತನ ಶಾಂತಿ ಸ್ವರೂಪ ತಮಗಿಲ್ಲವೆಂಬ ಕ್ರೋಧದಿಂದ, ಆತನ ಮೇಲೆ ಕತ್ತಿ ಕಟ್ಟಿ ಶಿಲುಬೆಯ ಮೇಲೇರಿಸಿದರಂತೆ. ಆತನಾದರೋ, ಈ ಸಮಾಪ್ತಿಯನ್ನು ಕಂಡಿದ್ದರೂ, ಕಡೆಯ ಊಟದ ದಿನ ಸ್ನೇಹಿತನೆಂದೆನಿಸಿಕೊಂಡಿದ್ದವನನ್ನು ಪ್ರೀತ್ಯಾದರಗಳಿಂದ ಮಾತನಾಡಿಸಿ, ನನಗೆ ಹೇಗಾದರೂ ಆಗಲಿ, ನಿನಗೆ ದೇವರು ಶಾಂತಿ, ಸೌಖ್ಯ, ಒಳ್ಳೆಯ ಬುದ್ಧಿಯನ್ನು ಇನ್ನು ಮೇಲಾದರೂ ಕೊಡಲಿ ಎಂದು ಹರಸಿದನಂತೆ.

ಇದೇನು ಅಂತೆ ಕಂತೆ ಹಳೆಯ ಕತೆ ಎನ್ನಬಹುದು ನೀವು. ಅಂದು ಹಾಗಾಯಿತು. ಚರಿತ್ರೆಯಲ್ಲಿ, ಮಾನವ ಚರಿತ್ರೆಯಲ್ಲಿ, ಸಂಘಟನೆಗಳು ಮರಳಿ ಮರಳಿ ತಲೆದೋರುವುವು. ಅಂದು ಶಿಲುಬೆಯನ್ನೇರಿದ ಮಹಾತ್ಮನು ಇಂದು ಜನಸಮುದಾಯದ ಶಾಂತಿ ಸೌಖ್ಯಗಳಿಗಾಗಿ ತನ್ನ ದೇಹವನ್ನೇ ಬಲಿಯಾಗಿ ಹವಣಿಸಿರುವನು. ತನ್ನನ್ನೇ ಬಲಿ ಕೊಟ್ಟ ತನ್ನ ಸ್ನೇಹಿತರು ಎಂದು ಹೇಳಿಕೊಳ್ಳುವವರನ್ನೂ ಆತನು "ನೀವು ಸರಿಯಾದ ಮಾರ್ಗದಲ್ಲಿ ಹೋಗುವಂತೆ ನಿಮಗೆ ದೇವರು ಬುದ್ಧಿಯನ್ನು ಕೊಡಲಿ, ನಿಮ್ಮ ಶಾಂತಿ ಸೌಖ್ಯಗಳು ಬೇಗನೇ ದೊರಕಲಿ" ಎಂದು ಹರಸುತ್ತಿರುವನು.

ಇಂತಹ ಮಹಾತ್ಮರಿಗೆ ಮರಣವುಂಟೇ ?

ಭೇಟಿ

ನಾನು:—ಸ್ವಾಮಿ ! ನಾನು ಈ ಊರಿನಲ್ಲಿ ಒಬ್ಬ ಪತ್ರಿಕಾ ಪ್ರತಿನಿಧಿ. ದಯವಿಟ್ಟು ತಮ್ಮ ವಿಷಯವನ್ನು ಕೊಂಚ ತಿಳಿಸಿದರೆ ನನ್ನ ಪತ್ರಿಕೆಗೆ ಕಳುಹಿಸುತ್ತೇನೆ. ಸಂಪಾದಕರು ನನಗೆ ಕಾಗದ ಬರೆದಿದ್ದಾರೆ.

ಅವರು:—ಹಾಗೋ! ಬನ್ನಿ. ಕೂತು ಕೊಳ್ಳಿ ಅಲ್ಲೇ! ಅಲ್ಲೇ ಕೂಡಿ.

ನಾನು:—ಅಲ್ಲಿ ಆ ರೂಂನಲ್ಲಿರುವವರು ನಿಮ್ಮ ತಮ್ಮಂದಿರೇನು ?

ಅವರು:—ಯಾರು? ಆತನೇ? ತ್ಸ್ಸ.... ತ್ಸ್ಸ....ತ್ಸ್ಸ ಆ ವಿಷಯ ಮಾತ್ರ ನನ್ನ ಹತ್ತಿರ ಪ್ರಸ್ತಾಪಿಸಬೇಡಿ. ನನಗೊಬ್ಬ ತಮ್ಮ ಇದ್ದ. ಪಾಪ. ನಾಣಿ ಅಂತ ಅವ ನನ್ನು ಕರೆಯುತ್ತಾ ಇದ್ದೆವು. ಆದರೆ ಆ ವಿಷಯ ಮಾತ್ರ....

ನಾನು:—ಹಾಗಾದರೆ, ಅವರಿಲ್ಲವೇ ನೀಗ ? ತೀರಿಕೊಂಡುಬಿಟ್ಟರೇನು ?

ಅವರು:—ಅದೇ ನನಗೂ ಅನುಮಾನ. ತೀರಿಕೊಂಡಿರಬೇಕು ಅಂತ ತೋರುತ್ತೆ. ಇನ್ನೂ ನಿರ್ಧರವಾಗಿಲ್ಲ. ಅದೇ ವಿಚಿತ್ರ. ಅದೇ ಸ್ವಾರಸ್ಯ.

ನಾನು:—ಅಯ್ಯೋ ಪಾಪ! ಮನೆ ಬಿಟ್ಟು ಹೊರಟು ಹೋದರೇನು? ಪತ್ತೆ ಆಗಿಲ್ಲವೇನು ಇನ್ನೂ? ಬಹಳ ವರ್ಷ ವಾಯಿತೆ ?

ಅವರು:—ಹೊರಟು ಹೋದ ಹಾಗೆಯೇ. ಅವನನ್ನ ಹೂತು ಬಿಟ್ಟ ಮೇಲೆ ಅಲ್ಲವೆ ? ನೀವೇ ಹೇಳಿ.

ನಾನು:—ಹೂತು ಬಿಟ್ಟಿರಾ? ಹೂತು! ತೀರಿಕೊಂಡರೋ ಅಂತ ನಿರ್ಧರ ಆಗುವು ದಕ್ಕೆ ಮೊದಲೇ ಹೂತು ಬಿಟ್ಟಿರಾ ? ಅಯ್ಯೋ ಪಾಪವೇ !

ಅವರು:—ಛೆ ಛೆ ! ಹಾಗಲ್ಲ ! ಅವ ನೇನೋ ಸಾಕಾದಷ್ಟು ಸತ್ತಿದ್ದ.

ನಾನು:—ಚೆನ್ನಾಗಿದೆ ಸ್ವಾಮಿ ನೀವು ಹೇಳೋದು ! ಸಾಕಾದಷ್ಟು ಸಾಯುವು ದೆಂದರೇನು ? ಹೂಳುವುದೆಂದರೇನು? ತೀರಿಕೊಂಡನೋ ಏನೋ ಎಂಬ ಅನು ಮಾನವೇನು ?

ಅವರು:—ಹಾಗಲ್ಲ, ಹಾಗಲ್ಲ. ಅವನು ಸತ್ತ ಅಂತ ನಾವು ತಿಳಿದುಕೊಂಡೆವು, ಅಷ್ಟೆ.

ನಾನು:—ಓ ! ಹಾಗಾದರೆ, ಮತ್ತೆ ಬದುಕಿಕೊಂಡರೋ ಅವರು ? ಅದೀಗ ಸೋಜಿಗ ! ಅದೀಗ ತಮಾಷೆ !

ಅವರು:—ಇಲ್ಲ, ಇಲ್ಲ.


ನಾನು:—ಚೆನ್ನಾಗಿದೆ ಸ್ವಾಮಿ, ತಮ್ಮ ಮಾತು ! ಸತ್ತರು ಅಂತೀರಿ. ಸತ್ತವರನ್ನ ಹೂತಿರಿ ಅಂತೀರಿ. ಇದರಲ್ಲಿ ವಿಚಿತ್ರ ಅಂತೀರಿ.

ಅವರು:—ವಿಚಿತ್ರವೇನು ಅಂತೀರೋ? ನೋಡಿ! ನಾವಿಬ್ಬರೂ ಅಣ್ಣ ತಮ್ಮಂದಿರಲ್ಲ. ಅವಳಿಜವಳಿ. ಆತನೂ ನಾನೂ ಒಂದು ಸಾರಿ ಯಾವುದೋ ಸಮಯದ ಮನೆಗೆ ಊಟಕ್ಕೆ ಹೋದಾಗ ನನ್ನ ಅಮ್ಮನಿಗೆ ಅನುಮಾನ ಬಂದು ಬಿಟ್ಟಿತು. ನಾನು 'ನಾನೋ ಅವನೋ' ಅಂತ. ಆ ಸಮಯದ

ಮನೆಯಲ್ಲಿ ಕೈ ತೊಳೆದುಕೊಳ್ಳುವುದಕ್ಕೆ ಹಂಡೆಯಲ್ಲಿ ನೀರು ತುಂಬಿದ್ದರು. ಅದರೊಳಕ್ಕೆ ಬಿದ್ದು ಒಂದು ಮಗು ಸತ್ತು ಹೋಯಿತು. ಅದು ಅವನೋ ನಾನೋ ಅನ್ನುವುದೇ ಅನುಮಾನ ಆವತ್ತಿನಿಂದ. ಕೆಲವರು ಅವನು ಅಂತಾರೆ; ಕೆಲವರು ನಾನು ಅಂತಾರೆ.

ನಾನು:—ನಿಮ್ಮ ಅಭಿಪ್ರಾಯವೇನು ?

ಅವರು:—ದೇವರೇ ಬಲ್ಲ ! ನನಗೇನು ಗೊತ್ತು ! ಈ ಹಾಳು ಸಮಸ್ಯೆಯನ್ನು ಬಿಡಿಸಿ ಕೊಡುವವರಿಗೆ ನಾನೇನಾದರೂ ಕೊಡಬಲ್ಲೆ. ಬರಿಯಿರಿ ನಿಮ್ಮ ಪತ್ರಿಕೆಯಲ್ಲಿ. ನನಗಂತೂ ರಾತ್ರಿ ನಿದ್ದೆಯೇ ಇಲ್ಲ. ಸತ್ತ ಹೆಣದ ಹಾಗೆ ತಿರುಗಾಡುತ್ತಿದ್ದೇನೆ. ಆದರೆ, ನಿಮಗೊಂದು ವಿಷಯ ಹೇಳಿರುತ್ತೇನೆ. ಪೇಪರಿನಲ್ಲಿ ಹಾಕಿಸಬೇಡಿ. ನಮ್ಮಲ್ಲೊಬ್ಬರಿಗೆ ಅಂಗೈ ಮೇಲೆ ಒಂದು ಕರೀ ಮಚ್ಚೆ ಇತ್ತು. ನೋಡಿ. ಅವನು ನಾನೇ. ಆ ಮಚ್ಚೆ ಇದ್ದವನೇ ಆಗ ಸತ್ತಿದ್ದು. ಯಾರಿಗೂ ಹೇಳಬೇಡಿ.



"ಮಕ್ಕಳ ಪ್ರದರ್ಶನದಲ್ಲಿ ಮೊದಲು ಬಂದ ಮಗು ಮೈದಾನದಲ್ಲಿ !"

ಬೋರ ಬಿದ್ದನು ನೆಲದಲಿ

೧

ಹಾಸ್ಯ ತುಳುಕುವ ಪದ್ಯವೊಂದನು
ಹೋದ ತಿಂಗಳು ಬರೆದೆ ನಾನು.
ಹಾ ಹ ಎನ್ನುತ ಜನಗಳದನು
ಓದಿ ಹಾಡುವರೆಂದೆನು!

೨

ಬರೆದ ಭೂಪತಿ ನಾನೆ ಓದಲು
ಘೊಳ್ಳು ಘೊಳ್ಳನೆ ನಕ್ಕೆನು!
ತೆಪ್ಪಗಿದ್ದವ ನಾನು ಮೊದಲು,
ಹುಚ್ಚನಾದೆನು ಫಕ್ಕನೆ!

೩

ಬೋರನನ್ನು ಕರೆದು ಬೇಗ
'ಬಾರೊ ದಡ್ಡ' ಎಂದೆನು.
ತೀರ ಧಾಂಡಿಗನಾದರೂ, ಮಗ,
ಬೇಗ ಧಾವಿಸಿ ಬಂದನು.

೪

ಪ್ರೆಸ್ಸಿಗೀಗಲೆ ಹೊರಡೊ ಮೂಢ
ಎಂದು ಪದ್ಯವ ಕೊಟ್ಟೆನು.
ಡ್ರೆಸ್ಸು ಮಾಡಲು ನಿಲ್ಲಬೇಡ
ಎಂದು ಡೋಸನು ಬಿಟ್ಟೆನು.

೫

ನಾನು ಕೊಟ್ಟ ಕಂತೆ ಕಾಗದ
ದೊಳಗೆ ಬಗ್ಗಿದ ಬೇಗದಿ.
ಮೊದಲ ಪಂಕ್ತಿಗೆ ತಡೆಯಲಾಗದ
ನಗುವು ಹೊಮ್ಮಿತು ವದನದಿ.

೬

ಎರಡು ಪಂಕ್ತಿಯನೋದಲಾಗಿ
ಹಲ್ಲು ಕಿರಿದನು ಬೋರನು!
ಮೂರು ಪಂಕ್ತಿಗೆ ತಲೆಯದೂಗಿ
ಅಬ್ಬಾ ಎಂದನು, ಬೋರನು.

೭

ನಾಕು ಪಂಕ್ತಿಗೆ ಅವನ ಗುಂಡಿಗೆ
ಬರಿಯ ನಗೆಯಾ ಮುದ್ದೆಯು!
ಐದು ಪಂಕ್ತಿಗೆ ಅಂಗಿಗುಂಡಿಗ
ಳೆಲ್ಲ ಹಾರುತ ಬಿದ್ದುವು.

೮

ಆರು ಪಂಕ್ತಿಗಳೋದಲಾರದೆ
ಬೋರ ಬಿದ್ದನು ನೆಲದಲಿ!
ನಕ್ಕು ಪಕ್ಕೆಗಳೆರಡ ಹಿಡಿದು
ಪೂರ ಮಾಡಿದ ಗಲಿಬಿಲಿ.

ಪಾಪ ಬೋರನು ಜ್ವರದಿ ನರಳಿದ
ಮೂರು ವಾರ ಮನೆಯಲಿ!
ನಗುವ ನಿಲಿಸಲು ಹೊಡೆದೆ, ಬಡಿದೆ,
ಇಂಥ ಪದ್ಯವ ಬರೆದೆನು.

"—ಂಡೇ—ಂಡಾ"

ನಿಜವಾಗಿಯೂ ಹೇಳುತ್ತೇನೆ, ಅನೇಕ ದಂಪತಿಗಳಿಗೆ ಮಕ್ಕಳಾಗಲೇ ಬಾರದು, ನನ್ನ ತಂದೆತಾಯಿಗಳೇ ಇದಕ್ಕೆ ಉದಾಹರಣೆ. ಅವರ ಮಾತು ಕೇಳಿದರೆ ನನಗೆ ರೇಗುತ್ತೆ. ಅವರು ನಿರೀಕ್ಷಣೆ ಮಾಡಿದ ದಿನ ನನಗೆ ಹಲ್ಲು ಹುಟ್ಟಲಿಲ್ಲ ವಂತೆ, ಮುಂದಿನ ನಾಲ್ಕು ಹಲ್ಲುಗಳು! ಅಯ್ಯೋ! ಅಯ್ಯೋ! ಅದೇನು ರಂಪ ಎಬ್ಬಿಸಿ ಬಿಟ್ಟರು ಇಬ್ಬರೂ ಸೇರಿಕೊಂಡು! ಮೂರು ನಾಲ್ಕು ದಿನ ಹೆಚ್ಚು, ಕಡಿಮೆ, ತಡೆದು ನೋಡಬಾರದೇ? ತಾಳ್ಮೆ ಇರ ಬಾರದೇ? ಪ್ರಪಂಚದಲ್ಲಿ ಬೇರೆ ಯಾರಿಗೂ ಮಕ್ಕಳೇ ಆಗಿಲ್ಲವೇ? ಅವಕ್ಕೆಲ್ಲಾ ಕಾಲ ಕಾಲಕ್ಕೆ ದಂತಪಂಕ್ತಿಗಳು ಬಾಯಿ ತುಂಬ ಬಂದಿಲ್ಲವೇ? ಆತುರ, ಅನುಮಾನ, ಅಹಂಕಾರ! ನನಗೇನು ಅಷ್ಟು ಅವಸರ ವಿರಲಿಲ್ಲ. ಇನ್ನೂ ಹತ್ತಾರು ವರ್ಷ ಬಾಳಿ ಬದುಕಬೇಕಾಗಿರುವಾಗ ನಾಲ್ಕು ದಿನ ತಡವಾಗಿ ಹಲ್ಲಿಗ ಅಂತ ಅನ್ನಿಸಿಕೊಂಡರೆ ಏನಂತೆ ಮಹಾ! ಅದೂ ಅಲ್ಲದೆ, ಅವು ಒಳಗಿಂದ ಇಳಿಯುತ್ತಿದ್ದನ್ನೂ ನಾನು ಬಲ್ಲೆ. ಆದರೆ, ಅವರಿಗೆ ಸಹನೆ ಸಾಲದು. ಯಾವುದೋ ಪುಸ್ತಕದಲ್ಲಿ ಓದಿಬಿಟ್ಟರು ಅಂತ ಕಾಣುತ್ತೆ "ಶಿಶುವಿಗೆ ಜನನಾನ್ತರ ೨೦೦ ದಿನಕ್ಕೆ ದಂತದ ಕಾಣಿಕೆ ಆಗಬೇಕು" ಅಂತ. ಅಥವಾ, ಆ ಡಾಕ್ಟರು, ಬೆಪ್ಪ, ಮುಂದಿನ ವಾರ, ಅಂತ ಹೇಳೀ ಬಿಟ್ಟಿದ್ದನೋ ಏನೋ? ನನ್ನ ತಂದೆ ನನ್ನ ಬಾಯೊಳಗೆ ಬೆರಳಿಟ್ಟು ಹುಡುಕಿದ್ದೂ ಹುಡುಕಿದ್ದೇ! ತಾಯಿಗೆ ಕಣ್ಣಲ್ಲಿ ನೀರೇ ಬಂದು ಬಿಟ್ಟಿತ್ತು. ಕೆನ್ನೆಗೂ ಇಳಿಯಿತು. ಗಲ್ಲದಿಂದ ತೊಟ್ಟಿಕ್ಕಿತು. "ಬಾಯಿ ಕೊಟ್ಟ ದೇವರು ಹಲ್ಲು ಕದಿಯುತ್ತಾನೆಯೇ?" ಅಂತ ನನ್ನ ನರಸು ಹೇಳಿದರೂ ಅವಳಿಗೆ ಸಮಾಧಾನವಾಗಲಿಲ್ಲ. ಬೋಳು ಬಾಯಿ ಅಂತ ನನ್ನ ಕಂದನನ್ನ ಎಲ್ಲಾರೂ ಬೈಯುತ್ತಾರಲ್ಲಾ ಅಂತ ನನ್ನನ್ನ ಎದೆಗೆ ತಬ್ಬಿಕೊಂಡರು. ತಂದೆಗಂತು ಮುಖ ಸಪ್ಪ ಗಾಯಿತು. ತಲೆ ತಗ್ಗಿಸಿಕೊಂಡು ನಿಧಾನ ವಾಗಿ ಅಲ್ಲಿಂದ ಕದಲಿದರು.

ಇದರ ಜೊತೆಗೆ ಅವರಿಗಿನ್ನೊಂದು ಗಾಬರಿ ಬೇರೆ! ಹತ್ತು ತಿಂಗಳು ಬೆಳೆದರೂ ಕೂಡ ನನಗೆ ಮಾತು ಬರಲಿಲ್ಲವಂತೆ. ಅವರ ದಿಗಿಲು ನೋಡಿ ನನಗೂ ಸ್ವಲ್ಪ ಕೊಂಚ ಗಾಬರಿಯಾಯಿತು. ಏನೇನೋ ಅಂದು ನೋಡಿದೆ. 'ಗಾ'....ಗೂ....ಅಂತ ಮಾತ್ರ ಹೊರಕ್ಕೆ ಕೇಳಿಸುವುದು. ನನಗೇ ಅವರ ಅರ್ಥ ಗೊತ್ತಾಗುತ್ತಿರಲಿಲ್ಲ. ಅವರೂ ಕೂಡ 'ಗಾ' ಅಂದಾಗ ಯಾವ ಯಾವುದನ್ನೋ ತಂದು ಕೊಡುವರು. ಗಾಣಿಗನ ಕೊಡ, ಗಾಂಧಿಯವರ ಚಿತ್ರ, ಗಾಂಧಿ ಗೊಂಬೆ, ಗಾಯದ ಮುಲಾಮು, ಗಾಲ್ಸ್‌ವರ್ಧಿ ನಾವಲು, ಗಾಳಿಪಟ.... ನನಗೆ ಪೂರಾ ರೇಗಿತು. ಗೂ....ಅಂದೆ. ಆಗ ನನ್ನ ಅಜ್ಜಿಗೆ ತುಂಬಾ ಸಂತೋಷವಾಯಿತು. "ನೋಡೆ! ನಿನ್ನನ್ನ ಗೂಬೆ ಅಂತ ಬೈಯುತ್ತೆ" ಅಂತ ತನ್ನ ಸೊಸೆಗೆ, ಅಂದರೆ ನನ್ನ ತಾಯಿಗೆ, ಹೇಳಿ ಕೈಚಪ್ಪಾಳೆ ತಟ್ಟಿದರು. ಗೂಬೆ ಅಂದರೆ ಏನೂ ಅಂತ ನನಗೆ ಗೊತ್ತಿಲ್ಲ ಪತ್ತೆ ಹಚ್ಚಬೇಕು. ಕೆಲ ದಿನಗಳಾದ ಮೇಲೆ

ಗಾಗೂ, ಗೂಗಾ ಎಂಬ ಎರಡು ಹೊಸ ಮಾತುಗಳನ್ನು ಸರಾಗವಾಗಿ ಹೊರಡಿಸಲು ಕಲಿತೆ. ಅವುಗಳನ್ನೇ ನನ್ನ ಜೀವನ ಮೋದನಗಳ ನಡುವೆ ಆಗಾಗ ಯದ್ವಾತದ್ವಾ ಪ್ರಯೋಗ ಮಾಡಲು ಉಪಕ್ರಮಿಸಿದೆ. ಆದರೆ, ಇದರಿಂದ ತಂದೆಯವರಿಗೆ ತೃಪ್ತಿಯಾದ ಹಾಗೆ ಕಾಣಲಿಲ್ಲ. ಆಮರ ಣಾಂತವೂ, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಾಶ್ರಮಗಳಲ್ಲೆಲ್ಲಾ ಬರೀ ಗಾಗೂ ಗೂಗಾಗಳಿಂದಲೇ ಪ್ರಪಂಚ ವ್ಯವಹಾರವನ್ನು ನಾನು ಸಾಧಿಸಬೇಕಲ್ಲಾ ಅಂತ ಅವರು ಗಳಗಳ ಗೋಳಾಡಿದರು. ನನ್ನ ತಾಯಿ ತಾಪತ್ರಯವಂತೂ ಹೇಳ ತೀರದು.

ಎಷ್ಟಾದರೂ ಹಿರಿಯ ಮಗ; ಅಲ್ಲ, ಹಿರಿಯ ಮಗು! ಅವರ ಸಂಕಟ ನನ್ನ ಮನಸ್ಸನ್ನೂ ಬಾಧಿಸಿತು. ಏನಾದರೊಂದು ಮಾತನ್ನು ಉಚ್ಚಾರ ಮಾಡಿ ನನ್ನ ಜನ್ಮ ದಾತೃಗಳ ಅಂತರಂಗವನ್ನು ತಂಪುಮಾಡ ಬೇಕೆಂದು ನಾನು ತೀರ್ಮಾನಿಸಿದೆ. ಹೆಬ್ಬೆಟ್ಟು ಚೀಪುವಾಗಲೆಲ್ಲಾ ನನಗೆ ಅದೇ ಯೋಚನೆ; ತೊಟ್ಟಿಲೊಳಗೆ ಕಣ್ಣು ಮುಚ್ಚಿ ಮಲಗಿದ್ದಾಗಲೆಲ್ಲಾ ನನಗೆ ಅದೇ ಮಹಾ ಸಮಸ್ಯೆ. ಅಜ್ಜಿಯ ಕಂಕುಳಲ್ಲಿ ಕುಳಿತು ಆಕೆಯ ಕಿವಿ ಹಿಡಿದೆಳೆವಾಗಲೂ ನಾನು ಗಾಗೂ ಅಲ್ಲದೆ ಬೇರೊಂದು ಮಾತನಾಡ ಲಾರೆನೇ ಎಂಬುದೇ ಚಿಂತೆ.

ಕಡೆಗೆ ಒಂದು ದಿನ ಸಂಜೆ ನಾನು ನನ್ನ ತಂದೆಯ ಮೇಜಿನ ಕೆಳಗೆ ಕುಳಿತು ಇರುವೆ ಗಳನ್ನು ಹಿಸುಕಿ ಕೊಲ್ಲುತ್ತಿರುವಾಗ, ಅವರು ಸರಕ್ಕನೆ ಒಳಗೆ ಬಂದು ಕುರ್ಚಿ ಯಲ್ಲಿ ಕುಳಿತು ಕಾಲು ನೀಡಿದರು. ನಾನು ಅವರ ಹೆಬ್ಬೆಟ್ಟಿನ ಮೇಲೆ ಒಂದು ಇರುವೆ ಯನ್ನು ಹರಿಯ ಬಿಟ್ಟೆ. ಅದು ಅವರನ್ನು ಕಚ್ಚದೆ ಕೆಳಕ್ಕೆ ಜಾರಿ ಬಿತ್ತು. ಆಗ ನಾನೇ ಅವರ ಬೆಟ್ಟನ್ನು ಚಿಗುಟಿದೆ. ಆಗ ಅವರು ಕೆಳಗೆ ಬಗ್ಗಿ ನೋಡಿ, "-ಂಡೇ -ಂಡಾ" ಅಂದರು. ಆ ಮಾತಿನ ಘೋರಣೆ, ಅದ ರಲ್ಲಿ ಅಡಕವಾದ ಪ್ರಾಸ, ಅದರೊಳಗಿಂದ ಹೊರಹೊಮ್ಮಿದ 'ಘಂಟಾಘೋಷ' ನನ್ನ ಮನಸ್ಸನ್ನು ಸೂರೆ ಮಾಡಿತು. ತಕ್ಷಣವೇ ನನಗೆ ಗಾಗೂಗಳ ಮೇಲೆ ವೈರಾಗ್ಯ ಹುಟ್ಟಿತು. ಆ ಕ್ಷಣದಿಂದ ನಾನು ಚಾಪೆ ತೊಡೆಯ ಮೇಲೆ ಕುಳಿತಿದ್ದರೂ, ನನ್ನನ್ನು ಯಾರು ಯಾವ ರೀತಿ ಮುದ್ದಿಸುತ್ತಿದ್ದರೂ, ನನ್ನ ಧ್ಯಾನ ಧಾರಣ ಸಮಾಧಿಗಳೆಲ್ಲವೂ ಕೇವಲ "-ಂಡೇ -ಂಡಾ" ಎಂಬ ಮಾತಿನ ಮನನದಲ್ಲೇ ಇತ್ತು. ರಾತ್ರಿ ತೊಟ್ಟಿಲಲ್ಲೇ ಅದನ್ನು ನನಗೆ ನಾನೇ ನೂರಾರು ಸಲ ಅಂದು ಅದರ ಮಾಧುರ್ಯಕ್ಕೆ ಮೆದುಳನ್ನು ಅದವಿಟ್ಟಿದ್ದೇನೆ. "ಮರೆಯೆ ಮರಿಗನ್ನಡಂ" —ಎಂದು ನನಗೆ ನಾನೇ ಜಯಘೋಷ ಮಾಡಿಕೊಂಡಿದ್ದೇನೆ.

ಕಡೆಗೆ, ಮೊನ್ನೆ (ಅವತ್ತು ಭಾನುವಾರ; ನನ್ನ ತಂದೆಯವರು ಮನೆಯಲ್ಲೇ ಇದ್ದರು. ಏಕಾದಶಿ, ತಾಯಿ ಅಜ್ಜಿಗೆ ಫಲಾರ ಮಾಡು ತ್ತಿದ್ದರು) ನಾನು ಆ ಮಾತನ್ನು ಚೆನ್ನಾಗಿ ಅಭ್ಯಾಸ ಮಾಡಿ ಪ್ರಯೋಗಕ್ಕಾಗಿ ಕಾದಿದ್ದೆ. ಪಕ್ಕದ ಮನೆ ಕಾಟಾಚಾರರು ನನ್ನ ಕೊಠಡಿಯೊಳಕ್ಕೆ ಬಂದರು. ಕಾಟಾ ಚಾರರು ಅಂತ ಅವರಿಗೆ ನಾನು ಇಟ್ಟ

ಹೆಸರು. ಬೇರೊಬ್ಬರಿಗೂ ಅದಿನ್ನೂ ಗೊತ್ತಿಲ್ಲ. ಅವರು ಬಂದು ನನ್ನನ್ನು ಎತ್ತಿ ಮುತ್ತಿಟ್ಟರು. ಹಾಳು ನಶ್ಯದ ಮೂಗು! ಎಂಟು ಹತ್ತು ದಿನ ಬೆಳೆದ ಮುಳ್ಳು ಬೇರೆ ಮುಖದ ತುಂಬಾ! ಆದರೂ ನನ್ನ ಹೊಸ ಮಾತನ್ನು ಅವರ ಕಿವಿಯಲ್ಲೇ ಹೇಳಿದೆ. ನಾನು ಅವರನ್ನು "-ಂಡೇ -ಂಡಾ" ಅಂತ ಕೂಗಿದೆ, ತಂದೆಯವರು ನನ್ನನ್ನು ಅಂದ ಹಾಗೆ, ಚಾಚೂ ತಪ್ಪದೆ! ನನ್ನ ಮಾತಿಗೆ ಅವರು ತುಂಬಾ ಕೋಪಿಸಿಕೊಂಡರು. "ಅಯ್ಯೋ! ಇವನೇ" ಅಂತ ಕಿರಿಚುತ್ತಾ ನನ್ನನ್ನು ಧುಘುಂ ಅಂತ ಕೆಳಕ್ಕೆ ಎಸೆದೇ ಬಿಟ್ಟರು. ಸರಿ. ನಾನು ಕಿಟ್ಟೋ ಅಂತ ಕೂಗಿದೆ. ಅವರಿಬ್ಬರೂ ಬಂದರು: ಅಜ್ಜಿಯೂ ಬಂದರು. ನಾನು ಮತ್ತೆ "-ಂಡೇ -ಂಡಾ" ಅಂದೆ. "ಯಾರೋ?" ಅಂದರು ಅಜ್ಜಿಯವರು. ಅವರಿಗೂ "-ಂಡೇ -ಂಡಾ" ಅಂದೆ. ತಕ್ಷಣ ಅವರು ನನ್ನನ್ನ ಮುತ್ತಿಡುವ ಬದಲು ನನ್ನ ಕೆನ್ನೆಗೆ ಒಂದು ಕೊಟ್ಟರು.

ಯಾಕೋ, ಗೊತ್ತಾಗಲಿಲ್ಲ. ನೀವು ಯಾರಾದರೂ ತಿಳಿಸುತ್ತೀರೇನು?

"-ಂಡೇ -ಂಡಾ" ಅಂದರೇನು? ಯಾಕೆ ಇವರು ಹೀಗೆ ರೇಗಾಡುತ್ತಿದ್ದಾರೆ?

"ಚುಬ್ಬು".

ಐಲೂರಿನಲ್ಲಿ ಒಬ್ಬ ಗೌಡನಿದ್ದನು,
ಬಲುದೊಡ್ಡ ಪ್ಯಾಸುಮಾಡಿ ಲಾಯರಾದನು:
ಸುಳ್ಳು ಲೆಕ್ಕ, ಲಂಚ, ಮೋಸ
ದಲ್ಲಿ ಸಾಟಿ ಇಲ್ಲವೆಂದು
ಐಲು ರಾಜ್ಯದಲ್ಲಿ ಭಾರಿ ಹುದ್ದೆಯಿತ್ತರು!

* * * *

ದಾಸ್ಪೈಯ್ಯನೆಂಬೊಬ್ಬ ಹಾರುವನಿದ್ದನು,
—ಆಸೆಯಿಂದ ಬೇಡಿ ಅಕ್ಕಿ ಸೇರಿಸಿದ್ದನು:
ಹುಳು ಬಿದ್ದು, ಮುಗ್ಗಿಹೋಗಿ
ಬಳ್ಳ ಪಾವು ಆಗಿಹೋಯ್ತು—
"ರೇಷನಿಂಗ್" ಎಂದವನ ಜೈಲಿಗೊಯ್ದುಬಿಟ್ಟರು.

—ಬೀರಣ್ಣ.

* * * *

ಹಿಟ್ಲರನ ಅಧಿಕಾರದ ಹತ್ತನೇ ವಾರ್ಷಿಕ ದಿನ, ಜರ್ಮನಿಯಲ್ಲಿ ಏನೊಂದೂ ಪ್ರದರ್ಶನವಿಲ್ಲ.

—ಪ್ರದರ್ಶನವಿರಲು ಏನು ವೈಕುಂಠ ಸಮಾರಾಧನೆಯೇ?

* * * *

ಅಮೇರಿಕಾದಲ್ಲಿ ಏಳು ಮಕ್ಕಳನ್ನು ಒಮ್ಮೆಲೇ ಒಬ್ಬಾಕೆಯು ಪ್ರಸವಿಸಿದಳಂತೆ.

—ತೆಬ್ಬಿಗುಬ್ಬಾಲೆಯಲ್ಲಿ ಹೀಗಾಗಿದ್ದರೆ, ಆಕೆಗೆ ಸಪ್ತಮಾತೃಕೆ ದೇವಸ್ಥಾನವನ್ನು ಕಟ್ಟಿಸಿ, ಪೂಜೆ ಪುನಸ್ಕಾರಗಳನ್ನು ಮಾಡುತ್ತಿದ್ದರು.

ನಡೆದ ಸಂಗತಿ

ಘಂಟಿ ಹತ್ತೂವರೆಯಾಗಿತ್ತು. ಶಾಲೆಗೆ ಹೋಗುವ ಹೊತ್ತು. ಮನೆಯಲ್ಲಿ ಅಡಿಗೆ ಇನ್ನೂ ಆಗಿರಲಿಲ್ಲ. ನನ್ನ ಮಗ ಗುಂಡ, "ಹೊಟ್ಟೆಗೆ ಹಿಟ್ಟು ಗಿಟ್ಟಸಿದ ಹೊರತು ಶಾಲೆ ಮೆಟ್ಟಲು ಮುಟ್ಟುವದಿಲ್ಲ" ಅಂತ ಹಠ ಹಿಡಿದ. ನಾನು ಸಮಾಧಾನ ಮಾಡಿದೆ. ಕೇಳಲಿಲ್ಲ. "ಗುಂಡಾ....ಗುಂಡೂ....ಗುಂಡಣ್ಣ....ನನ್ನ ಚಿನ್ನ....ಬಂಗಾರು....ಮಗೂ ....ಬೆಳಿಗ್ಗೆ ಎರಡು ಪ್ಲೇಟು ಅವರೆ ಕಾಳು ಉಪ್ಪಿಟ್ಟು ತಿಂದೆ—ನಿನ್ನೆ ದಿನ ಮಾಡಿದ ಕೋಡಬಳೇನೂ ಅಮ್ಮ ಈಗ ತಾನೆ ಕೊಟ್ಟಿದ್ದಾಳೆ—ನೀನು ಒಳ್ಳೆ ಹುಡುಗ—ಈಗ ಸ್ಕೂಲಿಗೆ ಹೋಗಿ ೧॥ ಘಂಟೆಗೆ ಬಾ—ಬಂದ ಕೂಡಲೇ ಬಿಸಿ ಬಿಸಿ ಬಿಸೀ ಬೇಳೆ ಹುಳೀ ಅನ್ನ ಹಾಕಿಸ್ತೇನೆ" ಎಂದು ಗಿಣಿಗೆ ಹೇಳಿದ ಹಾಗೆ ಹೇಳಿದೆ ನೋಡಿ. "ಉಹೂ" ಅಂದ. ಹೆದರಿಸಿ, ಗದರಿಸಿ, ಬೆದರಿಸಿದೆ. ಯಾವ ತಂತ್ರಗಳಿಗೂ ಜಗ್ಗದೆ, ಜುಟ್ಟು ಕೆದರಿದ ಜಟ್ಟಿಯ ಹಾಗೆ ನಿಂತ ಮಗನನ್ನು ಕಂಡು ಕೋಪ ಬಂತು. "ಎಲಾ, ಪೋಕರಿ, ಹಿರಿಯರ ಮಾತು ಲಕ್ಷ್ಯವಿಲ್ಲ, ತಡೀ ತಕ್ಕ ಶಾಸ್ತಿ ಮಾಡತೇನೆ" ಎಂದು, ಹತ್ತಿರ ಇದ್ದ ಸಣ್ಣ ಕೋಲನ್ನು ಮೇಲಕ್ಕೆತ್ತಿ, ಕೈ ನೀಡು ಅಂದೆ. ಸುಳಿವನ್ನರಿತ ಗುಂಡ, "ಅಮ್ಮಾ" ಅಂತ ಅರಚಿ, ಕಿಟ್ಟನೆ ಕಿರಚಿ, ಗೋಳೋ ಎಂದು ಅಳಲಾರಂಭಿಸಿದ. ಮಗನಿಗೆ ಏನಾಯಿತೋ ಎಂದು ಹೆದರಿ ಅಡಿಗೆ ಮನೆಯಲ್ಲಿದ್ದ ನನ್ನಾಕೆ, ಸೌಟ್ ಸಮೇತ ರೂಮಿಗೆ ಬಂದಳು. ನನ್ನ ಕೈಯಲ್ಲಿದ್ದ ಕೋಲು ನೋಡಿ ಕೋಪವೂ—ಕಣ್ಣೊರಸಿಕೊಳ್ಳುತ್ತಿದ್ದ ಗುಂಡನನ್ನು ಕಂಡು ಕನಿಕರವೂ ಉಂಟಾಯಿತು.

"ಅಲ್ಲಾ ಅಂದ್ರೇ, ಅರಿಯದ ಎಳೇ ಮಗೂನ ಬೆತ್ತದಲ್ಲಿ ಬಡಿಯೋಣ ಅಂದ್ರೇನು? ಬರೀ ಹೊಟ್ಟೇಲಿ ಶಾಲೆಗೆ ಹೋಗು ಅನ್ನೋದು ನ್ಯಾಯವೆ?—ನೀವು ಯಾವಾಗಲೂ ಗುಂಡೂನ ಗೋಳು ಹುಯಿದು ಕೊಳ್ಳುತ್ತೀರಿ—ಮೊನ್ನೆ ಭೂಗೋಳದ ಪುಸ್ತಕ ಕಳೆದು ಹಾಕಿದ ಅಂತ ಕೆನ್ನೆ ಹಿಂಡಿದ್ರಿ—ಇನ್ನೂ ಕೆಂಪಗೇ ಇದೆ ನೋಡಿ—ಪಾಪ—"ನಿಕ್ಕರ್ ಹರಿದು ಹೋಗಿದೆ, ಹೊಸ ನಿಕ್ಕರ್ ಹೊಲಿಸಣ್ಣಾ" ಅಂತ ಮಗು ಕೇಳಿದರೆ "ಬರೀ ಸ್ಟ್ರೈಪೇ ಪೇದೀಲಿ ಓಡಾಡು" ಅಂದರಂತೆ. ನಿಮ್ಮ ಕೈ ಹಿಡಿದ ನನಗೂ ಸರಿಯಾಗಿ ಒಂದು ಸೀರೆ ಇಲ್ಲಾ....ನೆರೆಮನೆ ನಾರಣಾಚಾರ್ ನೋಡಿ. ಹೇಗಿದೆ ಅವರ ಸಂಸಾರ...." ನಡುವೆ ನಾನು ಬಾಯಿ ಹಾಕಿ, "ಅಲ್ವೇ, ಈಗ ನಾನೇನು ಮಾಡಿದೆ?—ಹೆತ್ತಾಗ ತೊಡೆ ಮೇಲೆ, ಈಗ ತಲೆ ಮೇಲೆ ಕೂಡಿಸಿ—ಮುದ್ದಿಸಿ ಮುದ್ದಿಸಿ, ಮುತ್ತಾಳನ್ನಾಗಿ ಮಾಡಿದಿ, ಈ ಗುಂಡನ್ನ. ಹೇಳಿದ ಮಾತು ಕೇಳಲ್ಲ. ಶಾಲೆ ಬಿಟ್ಟ ಕೂಡಲೇ—ಪುಂಡರ ಜೊತೆ ಸೇರಿ ಒರಟು ಬಂಡೆಮೇಲೆ ಜಾರುಗುಪ್ಪೆ ಆಟ ಆಡಿ ಹೊಸ ಹೊಸ ನಿಕ್ಕರ್ ಹರಿದುಕೊಂಡು ಬಂದಿದಾನೆ ನಿನ್ನ ಕುಲಪುತ್ರ. ಮುಖ್ಯ ನಿನ್ನ ಮದುವೆ ಮಾಡಿಕೊಳ್ಳಬಾರದಾಗಿತ್ತು. ಅಪ್ಪ, ಅಮ್ಮನ ಮಾತು ತೆಗೆದು ಹಾಕಲಾರದೆ ಮಾಡಿಕೊಂಡೆ. ಏನೋ ನೀನೂ **S. S. L. C not selected** ಪರವಾಗಿಲ್ಲ, ಸಂಸಾರಚಕ್ರ ಸರಾಗವಾಗಿ ಉರುಳುತ್ತೆ ಅಂತ 'ಆಗಲಿ' ಅಂದೆ...."

"ನಾನೂ ನಿಮ್ಮನ್ನ ಕಟ್ಕೊಳ್ಳಬಾರದಾಗಿತ್ತು. ಈ ಮನೆ ಸೇರಿ ೬ ವರ್ಷ ಆಗಿದೆ. ಲೀಲಾ ಚಿಟ್ಟೀಸ್ ಲೋಲಾಕು ತರಿಸಿ ಕೊಡಲಿಲ್ಲ, ಜ್ಯಾರ್ಜೆಟ್ ಸೀರೆ ಕೇಳ ಬೇಡ ಅಂದ್ರಿ, ಬಳೆ ಮಾಡಿಸಿ ಅಂದ್ರೆ—ಬಂಗಾರದ ಬೆಲೆ ಇಳೀಲಿ ಅಂದು ಬಿಟ್ರಿ. ನೋಡಿ, ನೆರೆಮನೆ ನಾರಣಾಚಾರ್‌ನ ನೋಡಿ ಕಲಿತುಕೊಳ್ಳಬಾರದೇ" ಅಂತ ದಬಾಯಿಸಿ ಬಿಟ್ಟಳು.

ನನಗೆ ವಿಪರೀತ ಕೋಪ ಬಂತು, "ಏನೇ ನಾರಣಾಚಾರಿ ಮಾಡಿದ್ದು—ಅವನ ಹೆಂಡತಿ ಮದುವೆಗೆ ಮುಂಚೆ ಸೊಟ್ಟ ಬೈತಲೆ ತೆಗೆದು, Full Stop ಇಟ್ಟ ಹಾಗೆ ಕುಂಕುಮ ಹಚ್ಚಿಕೊಳ್ಳುತ್ತಿದ್ದಳಂತೆ—ಇವನ ಮನೆ ಸೇರಿದ ಕೂಡಲೇ ಹೆಂಡತಿಗೆ ಆರ್ಡರ್ (Order) ಮಾಡಿದ—ಮಧ್ಯ ಬೈತಲೆ ತೆಗೆದು, ಅಷ್ಟ ಕುಂಕುಮ ಇಟ್ಟು, ಅಚ್ಚಾರ್ ಕಚ್ಚೆ ಹಾಕು ಅಂತ—ತಿಳಿಕೋ ಈಗಲಾದರೂ—ಏನ್ಮಾಡಿದಾ ಅಂತ. ಆತ ಭೀಮ ಇದ್ದ ಹಾಗೆ ಇದ್ದಾನೆ. ಮನೆಗೆ ಬಂದ್ರೆ ಬೆಕ್ಕಿನ ಮರಿ ಇದ್ದ ಹಾಗೆ ಇರ್ತಾಳೆ ಹೆಂಡತಿ. ಇನ್ಮೇಲೆ ನೀನೂ ಹಾಗಿರಬೇಕು—ಇಲ್ಲದೆ ಹೋದರೆ—ನೋಡು (ಕೋಲು ತೋರಿಸಿ, ಎದೆ ತಟ್ಟಿಕೊಂಡು) ನಾನು ಗಾಮನ ತುಂಡಲ್ಲದಿದ್ದರೂ, ರಾಮನ ತುಂಡು— ಎಂದು ಇದುವರೆವಿಗೂ ಕೈಲಿದ್ದ ಕೋಲನ್ನು ಮೇಲಕ್ಕೆ ಎತ್ತಿದೆ. ಅವಳೂ ಸೌಟನ್ನು ಎತ್ತಿದಳು. ಬೆಚ್ಚಿಬಿದ್ದೆ. ಬಾರಿಸಿದ ಅಲಾರಂ ಘಂಟೆ ನಿಲ್ಲಿಸಲು ಹಾಸಿಗೆಯಿಂದ ಎದ್ದೆ. ಇದುವರೆಗೂ ಕಂಡ ಕನಸನ್ನು ನೆನಸಿಕೊಂಡೆ. ತಡೆಯಲಾರದ ನಗು ಬಂತು. ನನಗೆ ಗುಂಡನೆಂಬ ಮಗ ಇಲ್ಲ, ಮದುವೆ ಇನ್ನೂ ಆಗಿಲ್ಲ, ಹೆಣ್ಣು ಕೊಡುವುದಕ್ಕೂ ಯಾರೂ ಬಂದಿಲ್ಲ.

—ಎ. ಎಸ್. ಆರ್.

ವಿವರಿಸಿದರೆ ಒಳ್ಳೆಯದು

"ಶಿಶುವಿಹಾರದ ಕಟ್ಟಡವನ್ನು ಜನನ ಮಂಟಪದ ಮುಂಭಾಗದಲ್ಲಿ ಕಟ್ಟಬೇಕೆಂದು ತೀರ್ಮಾನಿಸಿರುತ್ತಾರೆ."

—ಚಾಮರಾಜನಗರ ಸುದ್ದಿ.

ಶಿಶು ಪ್ರದರ್ಶನದಲ್ಲಿ ಬಹುಮಾನಗಳನ್ನು ಹಡೆದ ಮಕ್ಕಳಿಗೆ ಹಂಚಲಾಯಿತು.

—'ಚಾಕ್ತಿ'.

....ರು ತಮ್ಮ ಭವನದಲ್ಲಿ ನ್ಯಾಯವಾದ ಬೆಲೆಗೆ ವ್ಯಾರಾಟ ಮಾಡುವ ಅಂಗಡಿಯೊಂದನ್ನು ತೆರೆದರು.

—ಬೆಂಗಳೂರು ಸುದ್ದಿ.

"ಕೊನೆಯವರೆಗೂ ಆಟ ನಡೆಯುವುದು."

....ಕ್ರಿಕೆಟ್ ವರದಿ.

"ಛಿನ್ನಪತ್ರಗಳನ್ನು ಬೆಳ್ಳಿ ಪೆಟ್ಟಿಗೆಯಲ್ಲಿಟ್ಟು ಸಮರ್ಪಿಸಲಾಯಿತು."

—ಏಕೆ? ಒಡೆದುಹೋಗಿದ್ದರಿಂದಲೇ?....

"ಮುಂಭಾಗಗಳಲ್ಲಿ ಸೈನಿಕರಿಗೆ ಇವು ಇಲ್ಲದೆ ನಿರ್ವಾಹವಿಲ್ಲ."

—ಬ್ಯಾಟರಿ ಜಾಹಿರಾತು.

"ಬಳೇಪೇಟೆ ಆಸ್ಪತ್ರೆ ರೋಡಿನಲ್ಲಿ ವಿವಾಹವನ್ನು ನೆರವೇರಿಸಿದರು."

—'ಚಾಕ್ತಿ'.

ರಾಜೀವಪುರ - ಹುಲಿ ಶಿಕಾರಿ

ರಾಜೀವಪುರದ ಅರಣ್ಯಗಳು ಪ್ರಸಿದ್ಧಿ, ಶಿಕಾರಿಗಳಿಗೆ. ಅರಣ್ಯಾಧಿಕಾರಿಗಳಿಗೆ ತಮ್ಮ ಕೆಲಸಗಳನ್ನು ಉಳಿಸಿಕೊಳ್ಳುವುದು ಬಲು ಪ್ರಯಾಸ. ಏಕೆಂದರೆ ಆ ಇಲಾಖೆಯಲ್ಲಿ ಜೋಟುದ್ದ ಸಂಬಳಕ್ಕೆ ಆಳುದ್ದ ಸಂಪಾದನೆ. ಹೀಗಿರುವಾಗ ಅಲ್ಲಿಯ ಅಧಿಕಾರಿಗಳಲ್ಲಿ ತಪ್ಪು ಕಂಡು ಹಿಡಿದು ದೊಡ್ಡವರಲ್ಲಿ ದೂರು ಹೇಳಿ ಆ ಕೆಲಸಗಳನ್ನು ತಾವು ಗಿಟ್ಟಿಸಬೇಕೆಂದು ಹಲವಾರು ಜನರು ಪ್ರಯತ್ನಿಸುತ್ತಿದ್ದುದು ಏನೂ ಆಶ್ಚರ್ಯಕರವಲ್ಲ. ಅದಲ್ಲದೆ ಈ ಹಲವಾರು ಜನರಲ್ಲಿ ಕೆಲವರ ಮಾವಂದಿರು ರಾಜೀವಪುರದ ಮಂತ್ರಿಮಂಡಲದಲ್ಲಿದ್ದವರು. ಇನ್ನೂ ಕೆಲವರು ಆಸ್ಥಾನಭೂಷಣರು. ಅಂದ ಮೇಲೆ ಈ ಕೆಲಸಗಳಿಗೆ ಪೋಟಾಪೋಟಿ.

ಈಗಿರುವ ಅಧಿಕಾರಿಗಳು ಕಳೆದ ಹತ್ತು ವರ್ಷಗಳಿಂದಲೂ ಆ ಕೆಲಸವನ್ನು ಉಳಿಸಿಕೊಂಡಿರುವರು. ಇದು ಸಾಧ್ಯವಾದುದು ಒಂದೇ ಕಾರಣದಿಂದ. ಸಂಸ್ಥಾನಕ್ಕೆ ಅತಿಥಿಗಳಾಗಿ ಬರುವ ಪರದೇಶದ ದೊಡ್ಡ ಮನುಷ್ಯರು ಶಿಕಾರಿಗೆ ಬಂದಾಗ ಅವರುಗಳು ತಲಾ ಒಬ್ಬೊಬ್ಬರು ಒಂದೊಂದು ಹದಿನಾರಡಿ ಹುಲಿಯನ್ನು ಹೊಡೆಯುವಂತೆ ಅನುಕೂಲಪಡಿಸುವುದು. ಮನೆಯಲ್ಲಿ ಇಲಿಯನ್ನು ಕಂಡರೆ ಕಿಟ್ಟನೆ ಕಿರಿಚಿದರೂ ಕಾಡಿನಲ್ಲಿ ಕೋವಿ ಬಲದಿಂದ ಹುಲಿಯನ್ನು ಹೊಡೆದೆ ಎಂದು ಹೇಳಿಕೊಳ್ಳುವಂತಾದಾಗ, ಹುಲಿಯ ಚರ್ಮವನ್ನು ಸಾಕ್ಷ್ಯಕ್ಕಾಗಿ ತೋರಿದಾಗ, ಅವರುಗಳಿಗೆ ಪ್ರಾಥರಸನಿಮಿಷ. ಈ ಸನ್ನಿವೇಶ ಕಲ್ಪಿಸಿಕೊಟ್ಟ ಅರಣ್ಯಾಧಿಕಾರಿಗಳ ವಿಷಯದಲ್ಲಿ ಆ ದೊಡ್ಡ ದೊಡ್ಡ ಪರದೇಶಿಯರು ಬಹಳ ಪ್ರಶಂಸನೆಯನ್ನು ಆಸ್ಥಾನದಲ್ಲಿ ಮಾಡಿಯೇ ಮಾಡುತ್ತಾರೆ. ಹೀಗಾಗಿ ಆಸ್ಥಾನದಲ್ಲಿ ಅರಣ್ಯಾಧಿಕಾರಿಯ ಬಲವು ಇಮ್ಮಡಿಯಾಗುವುದು. ಆ ಬಲವು ಕುಗ್ಗುವ ವೇಳೆಗೆ ಬೇರೆ ಯಾರಾದರೂ ದೊಡ್ಡ ಪರದೇಶಿಯರು ಬಂದೇ ಬರುತ್ತಾರೆ. ತಿರುಗಿ ಇವರ ಅದೃಷ್ಟ ಕುಲಾಯಿಸಿದಂತೆಯೇ!

ಬಂದಬಂದವರಿಗೆಲ್ಲಾ ಹೀಗೆ ಹುಲಿ ಸರಬರಾಯಿ ಮಾಡುವುದು ಕಷ್ಟವಲ್ಲವೇ ಎಂದು ನೀವು ಕೇಳಬಹುದು. ಆದರೆ ಅರಣ್ಯಾಧಿಕಾರಿಗಳು ಅನುಭವದ ಫಲವಾಗಿ ಇದನ್ನು ಒಂದು ವ್ರತದಂತೆ ಆಚರಿಸಿ, ಆಸ್ಥಾನವನ್ನು ಪ್ರಸನ್ನವಾಗುವಂತೆ ಮಾಡಿದ್ದರು. ನಾನೊಂದು ಬಾರಿ ಹೋದಾಗ ಈ ಆಚರಣೆಯನ್ನು ನೋಡಿದೆ. ಅದನ್ನೇ ವಿವರಿಸ ಹೊರಟಿದ್ದೆ.

ದೊಡ್ಡ ಪರದೇಶಿಯನು ಬರುವ ಮೂರು ದಿನಗಳ ಮುಂಚೆಯೇ ಅಧಿಕಾರಿಯು ಡಂಗುರ ಹೊಡಿಸುತ್ತಿದ್ದನು. "ಹುಲಿ ಸತ್ತಿದ್ದರೂ ಆಯಿತು, ಬದುಕಿದ್ದರೂ ಪರವಾಗಿಲ್ಲ. ಸತ್ತ ಹುಲಿಗೆ ಹತ್ತು ರೂಪಾಯಿ. ಬದುಕಿದ ಹುಲಿಗೆ ಇಪ್ಪತ್ತು ರೂಪಾಯಿ. ಹಳ್ಳಿಯ ಸೋಲಿಗರು ಹೇಗೋ ಮಾಡಿ ಸತ್ತ ಹುಲಿಯೊಂದನ್ನೂ ಸಾಯುತ್ತಿರುವ ವೃದ್ಧ ಹುಲಿಯೊಂದನ್ನೂ ತಂದು ಮಾರುತ್ತಿದ್ದರು.

ಅರಣ್ಯ ಇಲಾಖೆಯ ಆನೆಯಮೇಲೆ ಈ ದೊಡ್ಡ ಮನುಷ್ಯನನ್ನು ಸವಾರಿ ಮಾಡಿಸಿ ಅವನ ಕೈಲಿ ಕೋವಿಯನ್ನಿಟ್ಟು, ಸಾಯುತ್ತಿರುವ ಹುಲಿಯು ಪೊದರಿನ ಬಳಿಗೆ ಕರೆದುಕೊಂಡು ಹೋಗುವುದು ಈ ಮೆರವಣಿಗೆಗೆ [illegible] ಸೋಲಿಗರ ಗಲಾಟೆ, ಕೂಗಾಟ ಇತ್ಯಾದಿ ಯಶಸ್ವಿಯಾಗಿ ನಡೆಯುವುದು. ಅರಣ್ಯದಲ್ಲೇ ಒಂದು ಗಂಟೆ ಸುತ್ತಾಡಿಸಿ ನಂತರ ಈ ಪೊದರಿನ ಬಳಿಗೆ ಬರುವುದು. ಬಂದ ಕೂಡಲೇ ಈ ಹುಲಿಯನ್ನು ದೊಡ್ಡ ಮನುಷ್ಯನಿಗೆ ತೋರಿಸುವುದು, ಬೇಗ ಹೊಡೆಯಿರಿ ಎಂದು ಕೂಗುವುದು. ಆ ಗಲಾಟೆ ಗಾಬರಿಯಲ್ಲಿ ದೊಡ್ಡ ಮನುಷ್ಯನು ಕೋವಿಯನ್ನೆತ್ತಿ ಬೆವರು ಸುರಿಸುತ್ತಾ ಗುಂಡನ್ನು ಎಲ್ಲೋ ಹೊಡೆಯುವನು. ಆ ವೇಳೆಗೆ ಸರಿಯಾಗಿ ಆನೆಯ ಮಾವಟಿಗನು ಅಧಿಕಾರಿಯ ಸಂಜ್ಞೆಯನ್ನು ಕಂಡು, ಆನೆಯು ಹತೋಟಿ ತಪ್ಪಿದಂತೆ ಅದನ್ನು ಸಿಕ್ಕಾಪಟ್ಟೆ ಎಲ್ಲೆಲ್ಲೋ ಓಡಿಸಿಬಿಡುವನು. ಅಧಿಕಾರಿಯು ಈ ವೇಳೆಯಲ್ಲೆಲ್ಲಾ ದೊಡ್ಡ ಮನುಷ್ಯನಿಗೆ, ಹುಲಿಗೆ ಪೆಟ್ಟು ಬಿದ್ದುದನ್ನು ತಾನು ಕಂಡೆನೆಂದೂ, ಹುಲಿಯನ್ನು ಕಂಡ ಆನೆಯು ಕೆಲವು ವೇಳೆ ಹೀಗೆ ಹೆದರಿ ಓಡುವುದೆಂದೂ, ಇನ್ನೆರಡು ನಿಮಿಷಗಳಲ್ಲಿ ಹತೋಟಿಗೆ ಬರುವುದೆಂದೂ ಅಭಯವನ್ನು ಹೇಳುತ್ತಲೇ ಇರುವನು. ಬದುಕಿದೆಯಾ ಬಡ ಜೀವವೇ ಎಂದು ದೊಡ್ಡ ಮನುಷ್ಯನು [illegible]ಕೊಳ್ಳುವ ಹೊತ್ತಿಗೆ ಆನೆಯೂ ಹತೋಟಿಗೆ ಬರುವುದು. ತಿರುಗಿ ಅದನ್ನು ಮೆಲ್ಲಗೆ ಪೊದಲಿದ್ದ ಕಡೆಗೆ ಕರೆದು ತರುವನು.

ಸೋಲಿಗರು ಸತ್ತ ಹುಲಿಯೊಂದನ್ನು ಮಂಜಿನಗಡ್ಡೆ ವಿಳ್ಳೇದೆಲೆಗಳಲ್ಲೇ ಕೆಡವಂತೆ ಮುಚ್ಚಿಟ್ಟಿರುವರು. ಇಷ್ಟು ಹೊತ್ತಿಗೆ ವಿಳ್ಳೇದೆಲೆಯನ್ನೆಲ್ಲಾ ತೆಗೆದು ಹುಲಿಯು ಮಲಗಿರುವಂತೆ ಸರಿಯಾಗಿ ಏರ್ಪಡಿಸಿ, ಅದರ ಬಾಲವನ್ನು ದೇಹದ ಮೇಲೆ ಬೀಸುವಂತೆ ಮಾಡಿ, ಅಲ್ಲಲ್ಲೇ ನಿಲ್ಲುವರು. ದೊಡ್ಡ ಮನುಷ್ಯನು ಬಂದು ನೋಡುವ ವೇಳೆಗೆ ಸತ್ತ ಹುಲಿ. ತಾನು ಹೊಡೆದ ಹುಲಿ ಎಂಬ ಹೆಮ್ಮೆ. ಬಾಲದ ಮೇಲೆ ಕಾಲಿಟ್ಟು ನಿಂತುಕೊಂಡು, ಅರಣ್ಯಾಧಿಕಾರಿಯ ಸಿದ್ಧವಾದ ಕ್ಯಾಮರದಲ್ಲಿ ತನ್ನ ಚಿತ್ರವನ್ನು ತೆಗೆಸಿಕೊಳ್ಳುವನು. ತಲೆಯ ಹತ್ತಿರ ಒಮ್ಮೆ, ಕಾಲ ಹತ್ತಿರ ಒಮ್ಮೆ, ಸೋಲಿಗನ ಜೊತೆಯಲ್ಲೊಮ್ಮೆ, ಕೋವಿಯ ಮೇಲೂರಿ ಒಮ್ಮೆ ಹೀಗೆ ವಿಧ ವಿಧ ಭಂಗಿಗಳಲ್ಲಿ ಆರೆಂಟು ಚಿತ್ರಗಳು ತೆಗೆಯಲ್ಪಡುವುವು. ಒಮ್ಮೊಮ್ಮೆ ದೊಡ್ಡ ಮನುಷ್ಯನಿಗೆ ಅನುಮಾನಬರುವುದುಂಟು. ಇದೇನಿದು ಹುಲಿಯ ಸುತ್ತಲೂ ಇಷ್ಟು ನೀರು, ಇಷ್ಟು ವಿಳ್ಳೇದೆಲೆ ವಾಸನೆ ಎಂದು ಅಧಿಕಾರಿಯು ಕೂಡಲೇ ವಿಶದೀಕರಿಸುವನು. ಹುಲಿಯು ಹೆದರಿ ಬೆವರಿ ನೀರಾಯಿತೆಂದು, ಸೋಲಿಗರು ಹಗಲೂ ರಾತ್ರಿ ಎಲೆಡಿಕೆ ಇಲ್ಲದೆ ಇರುವುದಿಲ್ಲವೆಂದೂ ಆ ಕಾರಣದಿಂದ ಅಲ್ಲಿ ವಿಳ್ಳೇದೆಲೆ ವಾಸನೆಯೆಂದೂ.

ಹುಲಿಯನ್ನು ಮಹಾರಿನ "ಜಮ್ಸ್ ಮತ್ತು ಸುಲಿರ್ಯ" ಕಂಪೆನಿಗೆ ಕಳುಹಿಸಬೇಕೆಂದು ದೊಡ್ಡ ಮನುಷ್ಯರು ಅಪ್ಪಣೆ ಇತ್ತು, ಸೋಲಿಗರಿಗೆ ಮತ್ತು ಅಧಿಕಾರಿಗಳಿಗೆ ತಮ್ಮ ಧನ್ಯವಾದಗಳನ್ನರ್ಪಿಸಿ

ಓಂತಿರುಗಿ ಹೊರಟು ಹೋಗುವರು. ಸಂಸ್ಥಾನವನ್ನು ಬಿಡುವ ಮೊದಲು, ಆಸ್ಥಾನದಲ್ಲಿ ಅವರಿಗಾಗಿ ಒಂದು ಔತಣ ವಿದ್ದೇ ಇರುವುದು. ಅಲ್ಲಿ ದೊಡ್ಡ ಮನುಷ್ಯರು ಸಂಸ್ಥಾನಾಪತಿಗಳಿಗೆ ಹೇಳಿಯೇ ಹೇಳುವರು, ತಾವು ಎಷ್ಟು ಕಷ್ಟಪಟ್ಟು ಹುಲಿಯನ್ನು ಹೊಡೆದರೆಂದು, ಅಧಿಕಾರಿಗಳು ಎಷ್ಟು ಸಹಾಯ ಮಾಡಿದರೆಂದು.

ಅಧಿಕಾರಿಗಳಿಗೆ ತಮ್ಮ ಕೆಲಸದಿಂದ ವರ್ಗ ಆಗುವುದು ಇನ್ನೂ ಒಂದು ವರ್ಷ ಮುಂದಕ್ಕೆ ತಳ್ಳಿದ ಹಾಗೆಯೇ.

ನನಗೊಂದು ಅನುಮಾನ ಇತ್ತು. ಈ ಸೋಲಿಗದವರಿಗೆ ಹಣ, ಫೋಟೋ ಖರ್ಚು ಇವೆಲ್ಲವನ್ನೂ ಅಧಿಕಾರಿಯು ತನ್ನ ಕೈಯಿಂದ ಹೇಗೆ ಕೊಡಲು ಸಾಧ್ಯ ಎಂದು. ಹಾಗೆಯೇ ವಿಚಾರಿಸುವಲ್ಲಿ ಅದರ ಮರ್ಮವೂ ತಿಳಿಯ ಬಂತು.

"ಚರ್ಸ್ಟರ್ ಮತ್ತು ಸುಲಿರ್ಯ" ಅವರು ಸುಪ್ರಸಿದ್ಧ ಚರ್ಮ ಹದ ಮಾಡುವ ಶ್ವೇತ ವರ್ಣೀಯರು. ಅವರ ಹತ್ತಿರ ಬೇಕಾದ ಹಾಗೆ ಹಳೆಯ ಹುಲಿ ಚರ್ಮಗಳಿವೆ ಯಂತೆ. ಅರಣ್ಯಾಧಿಕಾರಿಗಳು ತಮ್ಮ ಸತ್ತ ಹುಲಿಯನ್ನು ಯಥಾಪ್ರಕಾರ ಮಂಜಿನಗಡ್ಡೆ ಪೆಳ್ಳೀದೆಲೆಯಲ್ಲಿ ಅದಷ್ಟು ದಿನ ಇಟ್ಟಿರುತ್ತಾರೆ. ದೊಡ್ಡ ಮನುಷ್ಯರು ಬಂದು 'ಹುಲಿ ಹೊಡೆದ' ಕೂಡಲೇ ಈ ಸಂಸ್ಥೆಗೆ ಕಾಗದ ಬರೆಯುತ್ತಾರೆ. 'ಹುಲಿ ಹೊಡೆದ'ವರು ಇಂತಹವರು ಬುಟ್ಟಿಗೆ ಬಿದ್ದರು ಎಂದು. ಆ ಕಂಪೆನಿಯವರು ಕೂಡಲೇ ನೂರು ರೂಪಾಯಿಯನ್ನು ಬಹುಮಾನವಾಗಿ ಅರಣ್ಯಾಧಿಕಾರಿಗಳಿಗೆ ಕೊಡುತ್ತಾರೆ. ತಮ್ಮಲ್ಲಿದ್ದುದರಲ್ಲಿ ಚೆನ್ನಾದ ಚರ್ಮ ಒಂದನ್ನು ಒಂದು ತಿಂಗಳ ನಂತರ ದೊಡ್ಡ ಮನುಷ್ಯರಿಗೆ ರವಾನಿಸುತ್ತಾರೆ. ಆ ಹುಲಿಯ ಚರ್ಮವು ಕಠಿಣತರವಾದುದೆಂದೂ ಅದನ್ನು ಹದ ಮಾಡಲು ಐನೂರು ರೂಪಾಯಿಗಳೆಂದೂ ಒಂದು ಲೆಕ್ಕವನ್ನು ಒಪ್ಪಿಸುತ್ತಾರೆ. ಶ್ವೇತ ವರ್ಣೀಯರ ಬಿಲ್ ಬಂದ ಮೇಲೆ ಕೇಳ ಬೇಕೇ? ದೊಡ್ಡ ಮನುಷ್ಯನು ಬಾಯಿ ಮುಚ್ಚಿಕೊಂಡು ಹಣವನ್ನು ತೆರುವನು.

ಈ ರೀತಿಯಲ್ಲಿ ಕಂಪೆನಿಯ ಹಳೆ ಮಾಲುಗಳೂ ಮಾರಾಟವಾಗಿ ಅವರೂ ಬದುಕಿಕೊಂಡರು. ಅಧಿಕಾರಿಯೂ ಸುಖ ಜೀವನ ನಡೆಸುವನು. ದೊಡ್ಡ ಮನುಷ್ಯನು ಸಾಯುವ ತನಕ ಹೇಳಿಕೊಳ್ಳಲು ಒಂದು ಪ್ರಸಂಗ ಸಿಕ್ಕಿದಂತಾಯಿತು.

ನಮಗೂ ಒಂದು ಪ್ರಯೋಜನ ಅನ್ನಿ. ಈ ವಿಚಾರ ಲೇಖನವನ್ನಾದರೂ ಬರೆಯ ಬಹುದು. ಹಾಗೆ ಮಾಡಿ ಈ ನಕ್ಷತ್ರೀಕ ಸಂ....ಮಹಾ....ಶಯರ ಕಾಟ ತಪ್ಪಿಸಿ ಕೊಳ್ಳಬಹುದು.

ಇವಳು ಅವಳೇ?

(ಮುಂದುವರಿದದ್ದು....'ಮದುವೆ' ಎಂಬ ಪ್ರಬಂಧಮಾಲೆ)

ಎದುರು ಬೆಂಚಿನಲ್ಲಿ ಒಂದು ಹುಡುಗಿ ತಾಯಿ ತಂಗಿ ಸಹಿತ ಕೂತಿತ್ತು ಅಂತ ಹೇಳಿದೆನಲ್ಲಾ! ಆ ಹುಡುಗಿ ಹೆಚ್ಚು ಹೊತ್ತು ಆ ಬೆಂಚಿನ ಮೇಲೆ ಕುಳಿತಿರಲಿಲ್ಲ. ಮೆಲ್ಲಗೆ ಕೆಳಗಿಳಿದು ಬಲಕ್ಕೆ ತಿರುಗಿ ಹತ್ತು ಹೆಜ್ಜೆ ನಡೆದು ಮರಳಿನಲ್ಲಿ ಕುಳಿತು ಅದನ್ನು ಬೊಗಸೆ ಬೊಗಸೆಯಾಗಿ ತೆಗೆದು ಗಾಳಿಗೆ ಎಸೆದಳು. ನನ್ನ ಕಣ್ಣಿಗೂ ಮಣ್ಣೆರಚಿದಳು, ಮಾಯಗಾತಿ! "ಲೋ! ಮರಳನ್ನು ಎತ್ತಿಹಾಕಬೇಡ! ನೋಡು! ಆ ಮಾಮನ ಕಣ್ಣಿಗೆ ಬೀಳುತ್ತದೆ....ಗಾಳಿ" ಎಂದರು ಅಲ್ಲಿದ್ದ ಹಿರಿಯ ಹೆಂಗಸು. "ಪರವಾಗಿಲ್ಲ.... ಆಡಲಿ" ಅಂದೆ ನಾನು, ಅತಿ ವಿನಯದಿಂದ. ಆದರೆ, ಆ ಹುಡುಗಿ ಅಲ್ಲಿಂದ ಎದ್ದು ನನ್ನ ಸುತ್ತ ಪ್ರದಕ್ಷಿಣೆ ಹೊರಟಳು. ತುಟಿ ತನಕ ಬಂದ ಮಾತನ್ನು ನಾನು ನುಂಗಲಿಲ್ಲ. ಹೇಳೇ ಬಿಟ್ಟೆ. "ಬಾ, ಅಮ್ಮ, ಇಲ್ಲಿ" ಅಂದೆ. ಆಹಾ! ಅದರ ನಾಚಿಕೆ ಮನಮೋಹಕ ವಾಗಿತ್ತು. "ಹೋಗೇ! ಮಾಮಾ ಕರೆದರೆ ಹೋಗಬಾರದೇನೆ!" ಅಂದರು ಆ ಕರುಣಾಮಯಮೂರ್ತಿ ಕಲ್ಲು ಬೆಂಚಿನ ಮೇಲಿಂದ. "ಥೂ" ಅಂದಳು ಹುಡುಗಿ. ಆಕೆಯ ಥೂಂಕಾರದಲ್ಲಿ ಒಂದು ವಿಶೇಷ ಬಗೆಯ ಚೆಲುವನ್ನು ಕಂಡೆ. ಕೂಡಲೇ ಅವಳಿಗೆ ನನ್ನ ಮೇಲೆ ಕನಿಕರ ಅಂಕುರಿಸಿತು. "ರೀ! ಆ ಹೂವು ಕಿತ್ತು ಕೊಡ್ತೀರೇನ್ರಿ!" ಅಂದಳು, ನನ್ನ ಹತ್ತಿರ ನಿಂತು. ಹೂವನ್ನು ಕೈಗೆ ಕೊಡುತ್ತಾ ಅದನ್ನು ಬಲವಾಗಿ ಹಿಡಿದೇ ಬಿಟ್ಟೆ. "ಬಿಡ್ರಿ! ಬಿಡ್ರಿ!" ಅಂದಳು. "ಊಹುಂ" ಅಂದೆ, ನಗುತ್ತ. "ಕಳ್ಳ ಪೋಲೀಸ್ ಆಡೋಣ" ಅಂದೆ. ಅವಳೇ ಪೋಲೀಸ್ ನಾನೇ ಕಳ್ಳ. ಅವಳ ಕೈಲಿದ್ದ ಒಂದು ಸೀಸದ ಕಡ್ಡಿಯನ್ನು ಅವಳಿಗೆ ಗೊತ್ತಿಲ್ಲದೆ ನಾನು ಕದ್ದು ಬಚ್ಚಿಡುವುದು, ಅವಳು ತಡಕಾಡಿ ತಾಪತ್ರಯಪಟ್ಟು ಅದನ್ನು ಸಂಪಾದಿಸಿ ನನ್ನ ಬೆನ್ನ ಮೇಲೆ ಗುದ್ದುವುದು—ಇದೇ ಆಟದ ಸ್ವಾರಸ್ಯ "ನೀನು ನಿನ್ನ ಗಂಡನಿಗೆ ಚೆನ್ನಾಗಿ ಬುದ್ಧಿ ಕಲಿಸುತ್ತೀಯಾ!" ಅಂದೆ ನಾನು. ಅನ್ನಬಾರದಾಗಿತ್ತು. ಏಕೆಂದರೆ, ಅಂದ ಕೂಡಲೇ ಅವಳ ಮುಖ ಕೆಂಪೇರಿತು. ಮೆಲ್ಲಗೆ ಅವಳು ದೂರ ಸರಿದು ಕಲ್ಲು ಬೆಂಚಿನ ಮೇಲೆ ಕುಳಿತುಬಿಟ್ಟಳು.

"ಕಲ್ಯಾಣಿ! ಕಲ್ಯಾಣಿ! ಬಾ ಹೋಗೋಣ" ಅಂತ ಆ ಹಿರಿಯ ಹೆಂಗಸು ಕೂಗಿಕೊಂಡಳು. ನನ್ನ ಕಿವಿ ನೆಟ್ಟಗಾಯಿತು: "ನಾನು ಬರುತ್ತೇನೆ, ಮಾಮ!" ಅಂದಳವಳು; ಕೋಗಿಲೆಯ ಕಂಠ; ಒಂದೊಂದು ಕಣ್ಣೂ ಒಂದೊಂದು ಮಾನಸ ಸರೋವರ!

ಕಲ್ಯಾಣಿ!....ಕಲ್ಯಾಣಿ!....ಇವಳು ಅವಳೇ?

—(ಎಸ್. ವೀ. ವೀ. ಕೃತಂ)

ಒಂದು ಘಟನೆ

ಇದೊಂದು ಘಟನೆ; ನಾವೇಳೆಂಟು ಜನ ಕ್ರಿಸ್‌ಮಸ್ ರಜದಲ್ಲಿ ಸಣ್ಣ ಸೈಕಲ್ ಪ್ರವಾಸ ಹೊರಟಾಗ ನಡೆದುದು.

ಬೆಂಗಳೂರು ಬಿಟ್ಟಾಗಲೇ ಬೆಳಿಗ್ಗೆ ಹತ್ತು ಗಂಟೆಯಾಗಿತ್ತು. ಎಲ್ಲರಿಗಿಂತ ಮೊದಲೇ ನಾವು ಮೂವರು ಹೊರಟರೂ, ಮಿಕ್ಕವರ ಸಲಕರಣೆ ಸುಧಾರಣೆಗಳು ಮುಗಿಯುವ ಹೊತ್ತಿಗೆ ಹತ್ತು ಗಂಟೆಯಾದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ ಗಣೇಶ ವಿಲಾಸಿನ ಮಸಾಲ್ದೋಸೆ, ಪ್ರತಿಯೊಬ್ಬರಿಗೂ ಸಿಮೆಂಟಿನಷ್ಟು ಗಟ್ಟಿ ತೋರಿದ್ದರಿಂದ ಊಟದ ಯೋಚನೆಯಿಲ್ಲದೆ, ಸೈಕಲ್‌ಗಳನ್ನೇರಿ ಹೊರಟೆವು.

ಕೇವಲ ಕೆಲವು ಗಂಟೆಗಳಲ್ಲಿ ಮಧ್ಯೆ ಒಂದೂರನ್ನು ತಲಪಿದೆವು. ಅದು ನಮ್ಮ ಪೈಕಿಯ, ಬಾಪುವಿನ ಸ್ಥಳ. ಅವನ ದಾಕ್ಷಿಣ್ಯಕ್ಕೋಸ್ಕರ ಅವರ ಮನೆಗೆ ಎಲ್ಲಾ ವಾಹನಗಳೂ ಒರಗಿದುವು; ಬಾಪು ತನ್ನ ಊರನ್ನು ಎಲ್ಲರೂ ಹೊಗಳುವಂತೆ ಹೊಗಳಿರಲಿಲ್ಲ. "ನಮ್ಮೂರು, ಊರಿಗೆ ಊರಲ್ಲ; ಕೊಂಪೆಗೆ ಕೊಂಪೆಯೂ ಅಲ್ಲ" ಎಂದು ಹೇಳಿದ್ದರಿಂದ, ಅದು ಯಾವ ಊರೋ (Name Board ನನ್ನ ಕಣ್ಣಿಗೆ ಬಿದ್ದಿದ್ದರೂ ಕೂಡ) ಈಗ ಮರೆತು ಹೋಗಿದೆ. ಪುನಃ ಈ ಊರಿನ ಪ್ರಸ್ತಾಪ ಬಂದರೆ ಖಂಡಿತವಾಗಿ ತಿಳಿಸುತ್ತೇನೆ.

ಬಾಪು, ಮನೆಯೊಳಕ್ಕೆ ಹೋಗಿ ಅವರಪ್ಪನ ಕೂಡ, ಅಮ್ಮನನ್ನು ಮರೆಯದೆ, ಏನೇನೋ ಮಾತನಾಡಿರಬೇಕು. ನಾವೆಲ್ಲರೂ ಅಲ್ಲಿಯೇ ಊಟಕ್ಕೇಳುವ ಹಾಗೂ, ಊಟ Readyಯಾಗುವವರೆವಿಗೆ ಅವನ ಅಜ್ಜಿಯು, ರಾತ್ರಿಯ ಫಲಹಾರಕ್ಕೆ ತಯಾರಿಸಿಕೊಂಡಿದ್ದ ಅರ್ಧ ಸೇರು ಅವಲಕ್ಕಿಯನ್ನು ನಾವೆಲ್ಲರೂ ಮೆಲ್ಲುವ ಹಾಗೂ Kitchen ಆಫೀಸಿನಿಂದ ಬಾಪು 'ಆರ್ಡರ್' ಬರೆಸಿಕೊಂಡು ಬಂದ. ಮೊದಲೇ ಹೇಳಿದ್ದೇನೆ, ಅವನ ದಾಕ್ಷಿಣ್ಯ ನಮಗೆ ಜಾಸ್ತೀಂತ—ಇಲ್ಲದಿದ್ದರೆ, ನಾಳೇ ಪರೀಕ್ಷೆಯ ಕಾಲದಲ್ಲಿ ಇವನ ಸಹಾಯ ಕೋಕರ್ ಆದರೆ ನಮ್ಮ ಪಾಡು ಬೇಡ—ಸರಿ ಒಪ್ಪಿದ್ದಾಯಿತು.

ಸ್ವಲ್ಪ ಹೊತ್ತಿನ ಮೇಲೆ, ಒಳಗೆ ಹೋಗಿದ್ದ ಬಾಪು ಮ್ಲಾನವದನನಾಗಿ, ನನ್ನ ಪಕ್ಕದಲ್ಲೇ ಕುಳಿತಿದ್ದ ಶಿವಯ್ಯನನ್ನು ನುಂಗಿ ಬಿಡುವಂತೆ ನೋಡುತ್ತಾ ನಮ್ಮನ್ನು ಸಮೀಪಿಸಿದ. ಬಂದವನೇ ನನ್ನನ್ನು ಬಹುದೂರ ಎಳೆದುಕೊಂಡು ಹೋಗಿ ಅನಿರೀಕ್ಷಿತವಾಗಿ ತನಗೊದಗಿದ ಕಷ್ಟವನ್ನು ಹೇಳಿಕೊಂಡ:—"ನೋಡು, ಪಂಡಿತ್! ನಮ್ಮ ಮನೆಯೋರೆಲ್ಲಾ ಬಹಳ 'ಆಚಾರ, ಮಡಿ, ಮೈಲಿಗೆ ಈ ವಿಷಯಗಳಲ್ಲಿ ಬಹಳ 'Forwardoo' ಮತ್ತೆ ನವಯುಗದ ನವನಾಗರಿಕತೆಯ ಪ್ರಪಂಚದಲ್ಲಿ ಬಹಳ 'Backwardoo' ಕಣೋ. ಈಗೇನ್ಮಾಡ್ಲಿ? ನಮ್ಮಜ್ಜಿ ಕೇಳಿಯೇ ಬಿಟ್ರು, "ಬಂದಿರೋರೆಲ್ಲಾ ಬ್ರಾಹ್ಮಣರು ತಾನೇ? ಯಾರೂ ಇಲ್ಲವೇ ಬೇರೇ ಜನಗಳು?" ಅಂತ. "ಹೌದೂ! ಎಲ್ಲರೂ ಬ್ರಾಹ್ಮಣರೇ'ಂತ ದಬಾಯಿಸಿ ಬಿಟ್ಟೆ.

ಹಾಳಾದವನ ವೀರಶೈವ ಶಿವಯ್ಯ ನಮ್ಜತೇ ಬ್ಲಿಂದ್ಬಿಟ್ಬಿದಾನಲ್ಲೋ. ಈಗೀ ಸಮಸ್ಯೇನ ಬಿಡಿಸೋಕೆ ನೀನೊಬ್ನೆ ಸರಿ. ನಿಲ್ಲಿಗೆ ಶಿವಯ್ಯನ್ನ ಹೋಟೇಲಿಗ್ಕಳುಹಿಸ್ಬಿಡ್ತೀಯಾ ಹೇಳು? ಆ Expenditureನ ನಾನೇ ಹಾಕ್ಕೊತ್ತೇನೆ." "ಅಯ್ಯೋ ಬಿಡ್ರೀ ಹೋಗಿ. ಅವನೇನೋ ಹೋಟೇಲಿಗ್ಹೋದ್ರೂ, ನೀನೀಗಾಗ್ಲೇ ಸುಳ್ಳು ಹೇಳ್ಬಿಟ್ಬಿಡ್ತೀಯೇ ಅವನೂ ಬ್ರಾಹ್ಮಣಾಂತ. ಆ ಮೇಲೆ ನಿನ್ನನ್ನೇ ದಬಾಯಿಸ್ತಾರೆ ನಿಮ್ಮ ನೇವ್ರು. ನೀನೇನೂ ಹೆದರಬೇಕಾದ್ದಿಲ್ಲ. ಶಿವಯ್ಯ, ನಮ್ಮ 'ಕರಿವಡ್ಡ', ಬಿಳಿಗಿರಿಯ್ಯಂಗಾರಿಗಿಂತಲೂ ಎಷ್ಟೋ ಮೇಲು. ನಾ ನ್ನೋ ಡ್ಕೋ ತೇ ನೆ ಎಲ್ಲಾನೂ. ಇವನೂ ಬ್ರಾಹ್ಮಣಾಂತ್ಲೆ ಎಲ್ಲರ ಜತೇಲೇ ಎಲೆ ಹಾಕು. ನಾನು ಅವನ್ನ 'ತಯಾರ್' ಮಾಡಿರ್ತೇನೆ, ಅಷ್ಟ್ರೊತ್ಗೆ" ಹೀ ಗೆ ಹೇಳಿ ಅವನ್ನೇನೋ ಕಳುಹಿಸಿದೆ.

ಆ ಮೇಲೆ ಸಮಸ್ಯೆಗೆ ಪರಿಹಾರವನ್ನು ಯೋಚಿಸತೊಡಗಿದೆ. ಅಲ್ಲಿಯವರೆವಿಗೂ ಅತಿ ಸುಲಭವಾಗಿದ್ದ ಸಮಸ್ಯೆ, ಕಠಿಣವಾಗುತ್ತಾ ಬಂದಿತು. ಆದರೆ 'ಎದೆಗುಂದಬೇಡ' ಎನ್ನುವ ಉಕ್ತಿ ಕಿವಿಯಲ್ಲಿ ಬಂದೇ. ಸಮನೆ ಅರಚಿಕೊಳ್ಳುತ್ತಿದ್ದುದರಿಂದ(?), ನಿಧಾನವಾಗಿ ಯೋಚಿಸಿ ಈ ನಿರ್ಧಾರಕ್ಕೆ ಬಂದೆ—"ನಾನು ಕುಳಿತಿರುವ ಎಲೆಗೆ (ನನ್ನ) ಎಡಕ್ಕಿರುವ ಎಲೆಯಲ್ಲಿ ಶಿವಯ್ಯನನ್ನು ಕೂರಿಸಬೇಕು. ನಾನೊಬ್ಬನಲ್ಲದೆ, ಮಿಕ್ಕವರು ಯಾರೂ ಅವನನ್ನು ಮಾತನಾಡಿಸಕೂಡದು. ನಾನು ಊಟಕ್ಕೆ ಕುಳಿತಾಗ ನಾನು ಆಚರಿಸುವಂತೆಯೇ ಶಿವಯ್ಯನೂ ಆಚರಿಸಬೇಕು. ತನಗೆ ಬೇಕು ಬೇಡವಾದ ಪದಾರ್ಥಗಳನ್ನು ಅವರ ಮನೆಯವರು ಬಡಿಸಲು ತಂದಾಗ, ಎಲ್ಲವನ್ನೂ ಕೈಸನ್ನೆಯಿಂದಲೇ 'ಬೇಕು' 'ಬೇಡ'ವೆಂದು, ಅವನು ಹೇಳಬೇಕು. ಊಟ ಮುಗಿದ ಮೇಲೆ ನಾನು ಏಳುವವರೆವಿಗೂ ಅವನು ಏಳಕೂಡದು. ಮಧ್ಯೆ ಅವನು ಮಾತನಾಡಬೇಕಾಗುವ ಪ್ರಸಂಗ ಬಂದರೂ, ಮೂ ಗ ನಿ ಗಿಂ ತ ಹೆಚ್ಚಾಗಿ ಮಾತನಾಡದೆ ಕುಳಿತಿರಬೇಕು."

ಈ ತೀರ್ಮಾನವನ್ನು ಗುಟ್ಟಾಗಿ ಪ್ರತಿಯೊಬ್ಬನಿಗೂ ತಿಳಿಸಿ, ಶಿವಯ್ಯನನ್ನೂ ತರಬೇತು ಮಾಡಿ, ಪುನಃ ಜ್ಞಾಪಿಸಲು ಬಂದ ಬಾಪುವಿಗೆ ಅಭಯವನ್ನು ಕೊಟ್ಟೆ.

ಊಟಕ್ಕೆ ನನ್ನ ಏರ್ಪಾಟಿನಂತೆ ಎಲ್ಲರೂ ಕುಳಿತೆವು. ನನ್ನ ಬಲಕ್ಕೆ ಬಾಪು ಬರುತ್ತಾನೆಂದು ನಾನೆಣಿಸಿದ್ದೆ. ಆದರೆ, ಬಾಪುವಿನ ತಂದೆ, ತಮ್ಮ ಕೇಸರೀ ರೇಷ್ಮೆ ಮುಗುಟವನ್ನು ಧರಿಸಿಕೊಂಡು, ಅಂಗಾರಾಕ್ಷತೆಗಳನ್ನು ಮರೆಯದೆ ಹಚ್ಚಿಕೊಳ್ಳುತ್ತಾ ನನ್ನ ಪಕ್ಕದಲ್ಲಿ ಕುಳಿತರು.


ಬಾಪುವಿನ ಅಜ್ಜಿಯವರೇ (ಸ್ವಯಂ) ಬಡಿಸಲುಪಕ್ರಮಿಸಿದರು. ಒಂ ದಾ ದ ಮೇಲೊಂದರಂತೆ, ಅನ್ನ, ಸಾರು, ಸಾರೂ ಅನ್ನಗಳು (ಇಷ್ಟೇನೇ ಅನ್ನ ಬೇಡಿ) ಬರಲಿತ್ತಿಸಿದವು. ಊಟಕ್ಕೆ ಕೂತಾಗ ಸುಮಾರು ಎರಡೂವರೆಯಾಗಿದ್ದರಿಂದ, ಕಾರಪ್ಪೋ ಕಹಿಯೋ ತಾನಾಗಿಯೇ ಸುಗಮವಾಗಿ ಗಂಟಲೊಳಗೆ ಇಳಿಯುತ್ತಿತ್ತು ಕವಳ. ಎಲ್ಲರೂ ನಿರಾತಂಕವಾಗಿ, ಮಾತನಾಡುತ್ತಾ, ನಿಧಾನವಾಗಿ ಊಟ ಮಾಡುತ್ತಿ-

ದ್ದರು. ಆದರೆ ನನಗಂತೂ ಕವಳ ಧ್ವಂಸ ಮಾಡುವ ಯೋಚನೆ ಹಾಗಿರಲಿ. ಬೇಗ ಊಟ ಮುಗಿದು, ಶಿವಯ್ಯನಿಂದ ಕಾಣಿಸಿಕೊಂಡ, ಕಳವಳ ಧ್ವಂಸವಾದರೆ ಸಾಕೆನ್ನುವ ಯೋಚನೆ ಹೆಚ್ಚಿತು.

ಅಷ್ಟರವರೆವಿಗೂ ನಾನು ಹೆಚ್ಚು ಮಾತನಾಡಲಿಲ್ಲ. ಮಿಕ್ಕವರೆಲ್ಲ ಸಾಕಷ್ಟು ಹರಟೆ ಕೊಚ್ಚಿದ್ದರು. ಬಾಪುವಿನ ತಂದೆಯವರಿಗೆ, ನನ್ನ ಎಡಕ್ಕೆ ಅಡಗಿಕೊಂಡು ಕೂತಿದ್ದ ಶಿವಯ್ಯನ ವಿಷಯದಲ್ಲಿ ಅನುಮಾನ ಬಂತೋ ಏನೋ, "ಅದೇನು ನಿಮ್ಮ ಪಕ್ಕದಲ್ಲಿರುವವರು ಯಾವ ವಿಷಯಕ್ಕೂ ಪ್ರವೇಶಿಸದೆ ಏನೂ ಮಾತನಾಡಲೇ ಇಲ್ಲವಲ್ಲಾ" ಎಂದು ನಿರ್ದಾಕ್ಷಿಣ್ಯದಿಂದ ನನ್ನನ್ನು ಕೇಳಿದರು. ಸದ್ಯ ನನ್ನನ್ನೇ ಪ್ರಶ್ನಿಸಿದರಲ್ಲಾ ಅನ್ನುವ ಹುರುಪಿನಿಂದ, "ಅವರು ಊಟ ಮಾಡುವಾಗ ಮಾತ್ರ ಮೌನದಿಂದಲೇ ಇರುತ್ತಾರೆ. ಸ್ಮಾರ್ತರಲ್ಲಿ ಕೆಲವರಲ್ಲಿ ಈ ಪದ್ಧತಿಯುಂಟು. ಅದೂ ಅಲ್ಲದೆ ಅವರು ಬ್ರಹ್ಮಚಾರಿ" ಎಂದು ಡೋಂಗಿ ಹೊಡೆದೆ. ಪಾಪ, ಆ ಪ್ರಾಣಿ, ನಿಜವಿರಬಹುದು ಎಂದುಕೊಂಡು ಪುನಃ ತುಟಿ ಪಿಟಕ್ಕೆನ್ನಲಿಲ್ಲ.

(ಸಾಕ್ಷಾತ್) ಮಜ್ಜಿಗೆಗೆ ಅನ್ನ ಬಂತು. ಬಾಪುವಿನ ಅಜ್ಜಿಯವರು ಮುದುಕರಾದರೂ, ಕಲ್ಮರಿಗೆಯಲ್ಲೇ ಕಡೆದ ಮಜ್ಜಿಗೆಯನ್ನ ತಂದು ಬಡಿಸುವ ಪದ್ಧತಿಯಿದು ಕಾಣುತ್ತೆ. ಮಜ್ಜಿಗೆಯ ಮರಿಗೆಯನ್ನು ಕೆಳಗಿಟ್ಟು, ಅನ್ನ ಬಡಿಸಿದರು. ಶಿವಯ್ಯ ಮುಷ್ಟಿಗೆ ಒಂದು ಗಜ್ಜುಗದಷ್ಟು ಅನ್ನವನ್ನು ಹಾಕಿಸಿಕೊಂಡ. ಅವನು ಅಷ್ಟು ಕಮ್ಮಿ ಹಾಕಿಸಿಕೊಂಡದ್ದು ನೋಡಿ ನನಗೇನೋ ಹೊಳೆಯಿತು. ಅಜ್ಜಿಯವರು ಮಜ್ಜಿಗೆಯ ಮರಿಗೆಯನ್ನು ಕೈಗೆತ್ತಿಕೊಂಡು ನನಗೆ ಬಡಿಸಿದರು. ಶಿವಯ್ಯನ ಎಲೆಗೆ ಹೋಗುವಾಗ್ಗೆ, ಅವನ ಎಲೆಯಲ್ಲಿದ್ದ ಕೊಂಚ ಅನ್ನವನ್ನು ನೋಡಿ, ಬಡಿಸಿರಲಿಲ್ಲವೇನೋ ಎಂಬ ಭ್ರಾಂತಿಯಿಂದ, "ಇನ್ನು ಸ್ವಲ್ಪ ಅನ್ನ ಬಡಿಸಲೇನಪ್ಪಾ" ಎಂದು ಕೇ[illegible]ವರು. ಅವನೋ ಬೇಡವೆಂದು ಕೈ ಅಡ್ಡ ಇಟ್ಟ. ನಾನು (ಸುಮ್ಮನಿರಬಾರದಾಗಿತ್ತೆ!) "ಹಾಕಿಸ್ಕೊಳ್ಳೋ ಇಕ್ ಸ್ವಲ್ಪ" ಅಂತ ತುಟಿ ಕಚ್ಚಿದೆ. ಬಾಪು ನಮ್ಮಿಬ್ಬರನ್ನೂ ಹೆದರಿಕೆಯಿಂದ ನೋಡುತ್ತಲೇ ಇದ್ದ. ಬಿತ್ತು ನಮ್ಮಿಬ್ಬರ ಮಧ್ಯೆ ಒಂದು ಬಾಂಬು, ಶಿವಯ್ಯನಿಂದ:—"ಇನ್ನೆಷ್ಟೋ ಉಣ್ಣೋದೂ"ಂತ, ಅವನ ಶೈಲಿಯ ಮಾತಿನಲ್ಲಿ ತನ್ನ ಮೌನವನ್ನು ಮುರಿದ. ಅಜ್ಜಿಯವರ ಕೈಯಿಂದ ಬಿದ್ದ ಮರಿಗೆ ಚೂರುಚೂರಾಯಿತು. "ಮೊದಲೇ ನಿಜ ಹೇಳಿದ್ದರೆ, ಬಾಪೂನ ಏನ್ಮಾಡ್ಬಿಡ್ತಿದ್ದೆ. ಈಗ ಪುನಃ ಸ್ನಾನ ಮಾಡ್ಬೇಕಲ್ಲಾ"ಂತ ಗೊಣಗುಟ್ಟಿಕೊಂಡು ಹೊರಟರು. ಅವನ ತಂದೆಯವರು. ಕೆಂಡಗಣ್ಣಿನಿಂದ ಎಲ್ಲರನ್ನೂ ನೋಡಿ, ಎದ್ದು ಹೊರಟರು. ಬಾಪು ತನ್ನ ಉರಿಗಣ್ಣಿನಿಂದ ನನ್ನ ಕಡೆಗೆ ನೋಡಿದ. ನನ್ನ ತಲೆ, ಬಾಗಿ, ಮಜ್ಜಿಗೆಯನ್ನವನ್ನು ಕಲೆಸುವ ವಿಧಾನವನ್ನು ನೋಡುತ್ತಿತ್ತು.

ನಾ. ಸು.



“ ಇವನನ್ನ ಒಂದು ಸುತ್ತು ಸುತ್ತಾಡಿಸ್ಬಿಟ್ಟು ಆಮೇಲೆ ಬರ್ತೀನಿ ನಿನ್ನ ನೋಡೋಕೆ....”

ಸಮಯ ಸಾಧನೆ

ಇಂಗ್ಲಿಷ್‌ನಲ್ಲಿ ಹೇಳುವುದುಂಟು, ‘Catch Opportunity by the forelock’ ಎಂದು. ಸಿಕ್ಕಿದ ಸಮಯವನ್ನು ಬಿಡಬಾರದು. ನಾವು ಯಾವ ಕೆಲಸವನ್ನು ಮಾಡಬೇಕಾದರೂ ಸರಿ, ಸಮಯವನ್ನು ಕಾದಿದ್ದು ಅದು ಒದಗಿದ ಕ್ಷಣವೆ ನಮ್ಮ ಕಾರ್ಯವನ್ನು ಸಾಧಿಸಬೇಕು. ಹಾಗಿದ್ದರೇ ನಾವು ಕೃತಕೃತ್ಯರಾಗುವುದು. ಕಾಲ ಮಿಂಚಿಹೋದರೆ ಕಣ್ ಕಣ್ ಬಿಡ್ ಬೇಕಾದೀತು.

ಹಲವು ರಾತ್ರಿಗಳ ಹಿಂದೆ ನಾನು ಮಾರ್ಕೆಟ್ ಚೌಕದಲ್ಲಿ ಬಸ್ಸಿಗೆ ಕಾಯುತ್ತಿದ್ದೆ. ಸುಮಾರು ಎಂಟು ಗಂಟೆ ಇರಬಹುದು. ಫೌಂಟೆನ್‌ಪೆನ್ ಬೇಕೆ ಸಾರ್, ಕನ್ನಡಕ ಬೇಕೆ ಸಾರ್, ಎಂದು ಕೇಳುತ್ತ ಕೆಲವರು ಸುಳಿದಾಡುತ್ತಿದ್ದರು. ನಿಮಗೆಲ್ಲ ಗೊತ್ತಿರುವಂತೆ ಇಂಥವರೆಲ್ಲ ಕಳ್ಳರು. ಅಲ್ಲೊ ಇಲ್ಲೊ ಯಾರ ಜೇಬಿಂದಲೊ ಹಾರಿಸಿಕೊಂಡು ಬಂದು, ಒಬ್ಬರಿಗೆ ಮೋಸ ಮಾಡಿದರೂ ಇನ್ನೊಬ್ಬರಿಗೆ ಸಹಾಯಮಾಡಿ, ತಮ್ಮ ಹೊಟ್ಟೆ ಹೊರೆಯುವ ಪ್ರಕೃತಿ ಇವರದು. ಇವರಿಗೂ ಮಿಕ್ಕ ವ್ಯಾಪಾರದವರಿಗೂ ಬಹಳ ವ್ಯತ್ಯಾಸವಿದೆ. ಹಣ್ಣಿನವನನ್ನು ನೋಡಿ. ಅವನ ಕೂಗು ಊರಿಗೆಲ್ಲ ಕೇಳಿಸುತ್ತದೆ. ನಿಮ್ಮ ಹತ್ತಿರ ಬಂದು ನಿಂತು, ಕಾಲನ್ನು ನೆಟ್ಟು, ತನ್ನ ಹಣ್ಣುಗಳನ್ನು ಪ್ರದರ್ಶಿಸಿ, ಅವನ್ನು ಹೊಗಳಿ, ತಾನೆ ಅಮೃತವನ್ನು ಕೊಡಬಂದ ಮೋಹಿನಿಯೊ ಎಂಬಂತೆ, ಒಂದು ಹಣ್ಣನ್ನು ತೆಗೆದು ನಿಮ್ಮ ಕಣ್ಣ ಮುಂದೆ ಆಡಿಸಿ, ಮೂಗಿನ ತಳಗೆ ಹಿಡಿದು, ಬಾಯ ಹತ್ತಿರ ಒಡ್ಡಿ, ನಿಮ್ಮನ್ನು ಬಲೆಗೆ ಹಾಕಿಕೊಳ್ಳಲು ಪ್ರಯತ್ನಿಸುತ್ತಾನೆ. ಇವನು ಆತುರವನ್ನು ಕಂಡವನೆ ಅಲ್ಲ. ನಮ್ಮ ಚೋರಿ ಅಸಾಮಿಯ ರೀತಿಯೇ ಬೇರೆ. ತಾನು ಕದ್ದು ತಂದಿರುವ ಪೆನ್ ಆಗಲಿ ಕನ್ನಡಕವಾಗಲಿ ತನ್ನದೆಯೊ ಎನ್ನುವಂತೆ ಜೇಬಿನಲ್ಲಿ ತರುತ್ತಾನೆ. ಎಕ್ಕಡ ಜೋಡುಗಳನ್ನು ತರಕಾರಿಯಂತೆ ಬಟ್ಟೆಯಲ್ಲಿ ಕಟ್ಟಿ ತರುತ್ತಾನೆ. ಇವನ ಮಾತು ನಿಮ್ಮೊಬ್ಬರ ಕಿವಿಗೆ ಮಾತ್ರ ಬೀಳುತ್ತದೆ. ಇವನ ದೃಷ್ಟಿ ಚಂಚಲ. ಯಾರನ್ನೂ ಈತ ನಂಬುವುದಿಲ್ಲ. ಇವನದು ಅನುಮಾನ ಪ್ರಕೃತಿ. ನೀನೆ ಸಿ. ಐ. ಡಿ. ಇರಬಹುದು ಎಂಬ ಇವನ ಭಯ. ಇವನ ನೋಟದಲ್ಲಿ ನಡಿಗೆಯಲ್ಲಿ ಈ ಭಯ ಕಾಣುತ್ತದೆ.

ಎಂದಿನಂತೆ ಬಹಳಹೊತ್ತು ಬಸ್ ಕಾಯುತ್ತ ಅಲ್ಲೆ ನಿಂತಿದ್ದೆ. ಒಬ್ಬ ಅಸಾಮಿ ಬಂದು, ‘ಫ್ಲಾನಲ್ ಬಟ್ಟೆ ಬೇಕೆ ಸಾರ್?’ ಅಂದ. ಎಷ್ಟಿದೆ ಎಂದು ಕೇಳಿದ್ದಕ್ಕೆ, ಮೂರೂವರೆ ಗಜವೆಂದೂ, ಒಂದು ಷರ್ಟಿಗೆ ಆಗುವುದೆಂದೂ ಉತ್ತರಕೊಟ್ಟ.

ರೋಗಿ ಬಯಸಿದ್ದೂ ಹಾಲೋಗರ, ವೈದ್ಯ ಕೊಟ್ಟಿದ್ದೂ ಹಾಲೋಗರ. ‘ಇನ್ನೇನು ಮಳೆಗಾಲ ಬಂತು. ಒಂದು ಫ್ಲಾನಲ್ ಷರ್ಟಿದ್ದರೆ ಒಳ್ಳೇದು. ಆದರೆ ಈ ಯುದ್ಧದ ಕಾಲದಲ್ಲಿ ಅದರ ಬೆಲೆ ಎಲ್ಲಿಂದ ಹೊಂದಿಸೋಣ!’ ಒಳ್ಳೆ ಬಟ್ಟೆಯಾದರೆ ಕಷ್ಟಸುಖ

ಎಂಟು ರೂಪಾಯಿ ಆಗುತ್ತೆ. ಏನು ಮಾಡೋದು?' ಎಂದು ಬಹಳ ದಿನಗಳಿಂದ ಯೋಚಿಸುತ್ತಿದ್ದೆ. 'ಈಗ ಈ ಆಸಾಮಿ ಸಿಕ್ಕಿದಾನೆ. ಎಲ್ಲೋ ಕದ್ದು ತಂದಿದಾನೆ. ನಾನು ಕೇಳಿದಷ್ಟಕ್ಕೆ ಕೊಡುತ್ತಾನೆ. ಜತೆಗೆ ನನ್ನ ಹತ್ತಿರ ಇರುವ ಖೋಟ ರೂಪಾಯಿಯನ್ನೂ ಸಾಗಿಸಬಹುದು' ಎಂದು ಅಂದಾಜು ಹಾಕಿದೆ. ಇಷ್ಟು ಸುಲಭವಾಗಿ ಒಂದೇ ಏಟಿಗೆ ಎರಡು ಕೆಲಸ ಸಾಧಿಸುವ ಸಮಯ ಯಾವಾಗಲೂ ಬರುತ್ತದೆಯೆ? ಅದೂ ಎಲ್ಲರಿಗೂ ಬರುತ್ತದೆಯೆ?

ಅಲ್ಲಿದ್ದ ಬೆಳಕಿನಲ್ಲಿ ಬಟ್ಟೆಯನ್ನು ಪರೀಕ್ಷಿಸಿದೆ. ಹಿಗ್ಗಾಮುಗ್ಗ ವ್ಯಾಪಾರವಾಗಿ ಕಡೆಗೆ ಎರಡು ರೂಪಾಯಿಗೆ ನಿಂತಿತು. ನನ್ನ ಖೋಟ ರೂಪಾಯಿನ ಜತೆಗೆ ಇನ್ನೊಂದು ರೂಪಾಯಿ ಸೇರಿಸಿ ಮೂರೂವರೆ ಗಜ ಬಟ್ಟೆಯನ್ನೂ ತೆಗೆದುಕೊಂಡೆ. ಆ ಬಡಪ್ರಾಣಿ, ಪಾಪ, ತನಗಾದ ಮೋಸವನ್ನು ಕಾಣದೆ ಪರಾರಿಯಾದ.

ಮಾರನೆಯ ದಿನದಿಂದ ಬಟ್ಟೆಯನ್ನು ಮಗುವಿನ ತೊಟ್ಟಿಲಲ್ಲಿ ಹಾಸುತ್ತಿದ್ದರೂ, ಖೋಟನಾಣ್ಯ ಉಪಯೋಗಕ್ಕೆ ಬಂತಲ್ಲ!

—ಬಿ. ಜಂ.

ಪೆಬ್ಬಿಗುಬ್ಬಾಲೆಯವನೊಬ್ಬನು ಹಿಟ್ಲರು, ಅಮೆರಿ ಇವರುಗಳ ಹೆಸರೇ ಕೇಳಿತ್ತಿಲ್ಲವಂತೆ.

—ಮೆದುವಾಗಿ ಮೃದುವಾಗಿ ಇವರುಗಳನ್ನು ವಿಶದೀಕರಿಸಬೇಕು ಅವನಿಗೆ.

* * * *

ಪೆಬ್ಬಿಗುಬ್ಬಾಲೆಯಲ್ಲಿ ಸಾಕಷ್ಟು ಹಾಸ್ಯಗಾರರಿಲ್ಲ ಎಂದು ಅಲ್ಲಿನ ಪತ್ರಿಕೆಯ ರೋದನವು.

—ನಮ್ಮೂರು ಸ್ವಲ್ಪ ಸುರಕ್ಷಿತ.

* * * *

ನಮ್ಮ ಸಹ ಪತ್ರಿಕೆಯ ಕಠಿಣ ಹೃದಯ—

ಬಿಹಾರಿನಲ್ಲಿ ಇನ್ನೊಂದು ಭೂಕಂಪವಾಯಿತು.

ಮಿಕ್ಕ ವಿನೋದಗಳಿಗೆ ೧೦ನೇ ಪುಟವನ್ನು ನೋಡಿ.

* * * *

ಇನ್ನೂ ಚೆನ್ನಾಗಿ ಹೇಳಬಹುದಾದುದು—

ಸ್ವಾ. ಪ. ಸಭೆಯಲ್ಲಿ ಆಗಮಿಸಿದ್ದ ಗಣ್ಯರಲ್ಲಿ ಶ್ರೀಯುತ ಸರ್........ರಾಯರು ಒಬ್ಬರು.

ಅವರಿಗೆ ವಿಶ್ರಾಂತಿಯೂ ವಿನೋದವೂ ಅವಶ್ಯಕವೆಂದು ಅವರ ವೈದ್ಯರು ಅಭಿಪ್ರಾಯಪಟ್ಟಿದ್ದರಂತೆ.

* * * *

ಪಾಕ ಸುಲಭ ಸೂಚನೆ

ಗೌರೀ ಹಬ್ಬಕ್ಕೆಂದು ನಮ್ಮಾಕೆ ತವರು ಮನೆಗೆ ಹೋಗಿದ್ದಳು. ಹಬ್ಬದ ದಿನ ಹೋಟೇಲಿಗೆ ಹೋಗುವುದೇ? ಮನೆಯಲ್ಲೇ ಅಡಿಗೆ ಸ್ವಪ್ರಯತ್ನದಿಂದ ಮಾಡುವುದು ಎಂದು ತೀರ್ಮಾನಿಸಿದೆ. ಹೀಗೆ ಅಡಿಗೆ ಮಾಡುವುದರ ಅನುಭವ ಪಡೆದರೆ, ಮನೆಯಾಕೆಯು ನಮ್ಮನ್ನು ಮೋಸಗೊಳಿಸಲಾಗುವುದಿಲ್ಲ. ಮೆಣಸಿನ ಪುಡಿಗೆ ಮೂರಾಣೆ ಎಂದು ಎರಡಾಣೆ ಮಿಗಿಸಾಟವನ್ನು ತಪ್ಪಿಸಬಹುದು. ಹಾಗೆಂದುಕೊಂಡು ಅಡಿಗೆ ಮಾಡಿಯೇ ಬಿಡೋಣ ಎಂದು ತೀರ್ಮಾನಿಸಿದೆ. ಬರೀ ಅನ್ನ ಸಾರು ಸುಖ ಸಾಲದು. ಒಂದು ಭಕ್ಷ್ಯವನ್ನೂ ಮಾಡಿಯೇ ಬಿಡೋಣವೆಂದಂದುಕೊಂಡೆ.

ಸರಿ. ನಾನು ಆ ದಿನ ಅಡಿಗೆಗೆ ಪಟ್ಟ ಕಷ್ಟ ಅನಾನುಕೂಲಗಳನ್ನೆಲ್ಲಾ ಬರೆದು ನಿಮ್ಮನ್ನು ಸತಾಯಿಸಲು ಮನಸ್ಸಿಲ್ಲ. ಕೇವಲ ಸಂಕ್ಷಿಪ್ತವಾಗಿ, ನನಗೆ ತಿಳಿದು ಬಂದ ವಿಷಯಗಳನ್ನು, ನನ್ನ ಅನುಭವವನ್ನು, ನಿಮ್ಮ ಸಹಾಯಾರ್ಥವಾಗಿ ಬರೆಯುತ್ತೇನೆ.

ಅನ್ನ. ಅಕ್ಕಿಯನ್ನು ತಪ್ಪಲೆಗೆ ಅರ್ಧ ತುಂಬಿ, ನೂರು ಬೆಟ್ಟು ನೀರನ್ನಿಟ್ಟು ಬೇಯಿಸಿದರೆ ಮಲ್ಲಿಗೆ ಹೂವಿನಂತಾಗುತ್ತದೆ. ಉಂಡರೂ ಮಲ್ಲಿಗೆ ಹೂವು ತಿಂದಂತೆಯೇ ಇರುತ್ತದೆ.

ಸಾರು. ಅಂಗಡಿಯಿಂದ ಸಾರಿನ ಪುಡಿಯನ್ನು ತಂದು ಬಿಸಿ ನೀರಿನಲ್ಲಿ ಕದರಿ ಕುದಿಸಿದರೆ ಸಾರು ಸಿದ್ಧ. ಡಬ್ಬಿಗೆ ಸುತ್ತಿರುವ ಕಾಗದದಲ್ಲಿ ಪುಡಿಯ ಪ್ರಮಾಣ ಇತ್ಯಾದಿ ಅಚ್ಚಾಗಿರುತ್ತದೆ. ಸಾರಿಗೆ ಬೇಳೆಯು ಬೇಕೇ ಬೇಕೆಂಬ ಮಾತಿಗೆ ಸ್ವಲ್ಪವೂ ಆಧಾರವಿಲ್ಲ. ತೊವ್ವೆ ಬೇಕಾದಾಗ ಬೇಳೆ ಹಾಕಬೇಕು.

ಹುಳಿ. ಮೇಲೆ ಹೇಳಿದಂತೆ ಸಾರು ಮಾಡಿ ಹೆಚ್ಚಿದ ಕಾಯಿಪಲ್ಯಗಳನ್ನು ಮಾತ್ರ, ಬೆರಳು ವಿನಾಯಿಸಿ, ಸಾರಿನಲ್ಲಿ ತೇಲಿಬಿಟ್ಟು ಕುದಿಸಿ.

ಮಜ್ಜಿಗೆಹುಳಿ. ವಿದ್ಯಾರ್ಥಿಗಳಿಗೆ ಬೇಕೇ ಬೇಕಾದ ಈ ಪದಾರ್ಥವು ಕೇವಲ ಸುಲಭ. ಮಜ್ಜಿಗೆ + ಹುಳಿ.

ತೊವ್ವೆ. ಸಾರಿನ ಪಾತ್ರೆಯ ತಳದಲ್ಲಿ ಸಿಗುತ್ತೆ.

ಪಾಯಸ. ಯುದ್ಧದ ಕಾಲದಲ್ಲಿ ಇದರ ಯೋಚನೆ ಯಾಕೆ?

ಆಂಬೊಡೆ. ದೊಡ್ಡವು ಆಣೆಗೆರಡು, ಚಿಕ್ಕವು ಕಾಲಾಣೆಗೊಂದು.

ಉದ್ದಿನೊಡೆ. ಮೇಲೆ ನೋಡಿ.

ಒಬ್ಬಟ್ಟು. ಗೋಧೀ ಹಿಟ್ಟಿನ ಪ್ರೋಲ್ಟೀಸ್ ಮಾಡಿ, ಪ್ರೋಲ್ಟೀಸಿನ ಲಕ್ಕೋಟೆಯೊಂದನ್ನು ಮಾಡಿ ಅದರೊಳಗೆ ಬೆಲ್ಲ ತುಂಬಿ ತಟ್ಟಿ ಬೇಯಿಸಿ.

ಮಿಕ್ಕ ತಿಂಡಿಗಳು. ಜೊಂಬಾನಂದ ಭವನದಲ್ಲಿ ಸಿಗುವುವು.

ಈ ಮುಖ್ಯ ವಿಷಯಗಳನ್ನು ಅರಿತು, ಅಡಿಗೆ ಮನೆಯಲ್ಲಿ 'ದೊಂಗಲುನ್ನಾರು ಜಾಗ್ರತ' ಎಂದು ಬೋರ್ಡು ಹಾಕಿದರೆ, ಅಡಿಗೆ ಸುಲಭ.

ಇನ್ನೂ ಹೆಚ್ಚು ವಿಷಯ ತಿಳಿಯಬೇಕಾದರೆ, ನಾನು ರಚಿಸಬೇಕೆಂದಿರುವ 'ಪಾಕ ಮಾರ್ಗದರ್ಶಿನಿ' ಗ್ರಂಥಕ್ಕೆ ಈಗಲೇ ಮುಂಗಡ ಹಣವನ್ನು ಕಳುಹಿಸಿ. ಕೇವಲ ೭-೮-೦ ರೂಪಾಯಿ ಮಾತ್ರ.

ಮುಂಗಡ ಹಣ ಕಳುಹಿಸಿದವರಿಗೆ 'ಘಟೋತ್ಕಜ' ಎಂಬ ಹೊಟ್ಟೆ ನೋವಿಗೆ ಗಾಂಡೀವದಂತ ಔಷಧಿ ಒಂದು ಡಬ್ಬಿ ಮುಫತ್ ಕೊಡುತ್ತೇನೆ.

—ಕೇ. ಫ.

ಮೋದಕ ಗೆಳೆಯರು

ಮೋದಕ ಗೆಳೆಯರಿ
ಎಲ್ಲರೂ ಬನ್ನಿ.
ಮೋದಕ ದೇವನ
ಸೇವೆಯ ಗೈಯುವ ||


ಕೆಲರಲ್ಲಿರುಗುವ ಚಕ್ಕುಲಿಯಾಗಿ
ಕೆಲರು ಮೆರೆವ ಮುರಿಜೋಂಪಗಳಾಗಿ ।
ಕೆಲರಲ್ಲಾರುವ ಜಾಂಬೂನಾಗಿ
ಕೆಲರು ಹೊಳೆವ ಸುರಿಪ್ರೂರಿಗಳಾಗಿ ||೧||

ಅಂದದ ಚೆಂದದ ದೋಸೆಗಳಾಗಿ
ಒಂದಿನ ದಿವಸದ ಪಲ್ಯವ ಸೇರಿ ।
ಎಳೆತಿಳಿಸಾರಿನ ಮಹಿಮೆಯ ಬೀರಿ
ಗಳಗಳರವದಿಂ ಗಂಟಲ ದಾಂಟಿ ||೨||




"ಧರ್ಮರಾಜಯ್ಯರ್ ಪಿಟೀಲು ಕೇಳಿದಿರಾ ಸ್ವಾಮಿ?"
"ಕೇಳಿದೆ ಸ್ವಾಮಿ, ಕೊಡೋದಿಲ್ಲಾಂದುಬಿಟ್ಟರು."

ಮಣ್ಯಂ ಕಂಪನಿಯವರ ತಯಾರಿಕೆಗಳು



ಮಣ್ಯಂ ಕಂಪನಿಯವರ ಸ್ನೋ, ಹೇರ್ ಆಯಿಲ್ ಮತ್ತು ಸೋಪ್ ಕರ್ನಾಟಕದಲ್ಲೆಲ್ಲ ಪ್ರಸಿದ್ಧಿ ಪಡೆದಿವೆ. ಅನೇಕ ವಸ್ತು ಪ್ರದರ್ಶನಗಳಲ್ಲಿ ಪ್ರಶಸ್ತಿಗಳನ್ನು ಪಡೆದಿವೆ. ಸೌಂದರ್ಯೋಪಕರಣಗಳಲ್ಲಿ ಇವಕ್ಕೆ ಮಿಗಿಲೆನಿಸುವವು ಬೇರೆ ಯಾವವೂ ಇಲ್ಲ ಎನಿಸಿಕೊಂಡಿವೆ. ಒಂದು ಸಾರಿ ಪರೀಕ್ಷಿಸಿ ನೋಡಿ, ತಾನೇ ತಿಳಿಯುತ್ತೆ !!



ಮಣ್ಯಂ ಅಂಡ್ ಕಂಪನಿ, ಮದ್ರಾಸು.